# ಎಳೂರು ದೇವರ ಕಾಳಗ



ರಾಜಪ್ಪ ದಳವಾಯಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು-೫೬೦ ೦೦೨

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಣೆ

# ಏಳೂರು ದೇವರ ಕಾಳಗ

ಪ್ರಧಾನ ಸಂಪಾದಕ

**ಡಾ. ಜೀ. ಶಂ. ಪರಮಶಿವಯ್ಯ**

ಸಂಪಾದಕ

**ರಾಜಪ್ಪ ದಳವಾಯಿ**

# ಏಳೂರು ದೇವರ ಕಾಳಗ

(ಜನಪದ ಕಾವ್ಯ)

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ರಾಜಪ್ಪ ದಳವಾಯಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ನೃಪತುಂಗ ರಸ್ತೆ : ಬೆಂಗಳೂರು-೫೬೦ ೦೦೨

*YEELUURU DEVARA KALAGA* (A Folk Narrative Verse)—
Collected and Edited by Sri Rajappa Dalavayi. Published by The Registrar, Karnataka Janapada and Yakshagana Academy, Nrupatunga Road, Bangalore-560 002. Pp. X+72. Price : 15-00.

First Edition : 1994

ಹಕ್ಕುಗಳು : ಸಂಪಾದಕರವು

**ಬೆಲೆ : ರೂ.೧೫-೦೦**

ರಕ್ಷಾಪುಟ ಕಲೆ : ಕನಕೇಶ ಮೂರ್ತಿ

ಮುದ್ರಕರು : ಎ. ಜಿ. ಸುವ್ರತೀಂದ್ರ
ವಾಣೀ ಪ್ರೆಸ್ : ಚಾಮರಾಜಪುರಂ : ಮೈಸೂರು-೫೭೦ ೦೦೪

# ಪ್ರಧಾನ ಸಂಪಾದಕರ ಮಾತು

ಕನ್ನಡದಲ್ಲಿ ಜನಪದ ಕಾವ್ಯಗಳ ಪರಿವೀಕ್ಷಣೆ ಈಗಾಗಲೆ ಸಾಕಷ್ಟು ನಡೆದಿದೆ. ಅನೇಕ ಸಂಪ್ರದಾಯದ ಕಾವ್ಯಗಾಯಕರು ನಮ್ಮ ಅಪೂರ್ವ ಜನಪದ ಕಾವ್ಯ ಸಂಪತ್ತನ್ನು ಸಂಗ್ರಾಹಕರ ಮೂಲಕ ಅನಾವರಣಗೊಳಿಸಿದ್ದಾರೆ. ಈ ಕಾವ್ಯಗಳಲ್ಲಿ ಧಾರ್ಮಿಕ ಕಾವ್ಯಗಳು, ಲೌಕಿಕ ಕಾವ್ಯಗಳು ಸೇರಿವೆ. ಅಪಾರ ಸಮೃದ್ಧಿಯ ಈ ಜನಪದ ಕಾವ್ಯಲೋಕದಿಂದ ಇನ್ನೂ ಹೊಸ ಹೊಸ ರಚನೆಗಳು ಬೆಳಕಿಗೆ ಬರುತ್ತಿವೆ. ಕರ್ನಾಟಕದ ತರುಣ ಪೀಳಿಗೆಯ ಜನಪದ ಉತ್ಸಾಹಿಗಳು ಈ ನಿಟ್ಟಿನಲ್ಲಿ ಸ್ತುತ್ಯವಾದ ಪ್ರಯತ್ನವನ್ನು ಮಾಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತಂತೆ ಹೇರಳವಾದ ಕಾವ್ಯಗಳು ಕಂಡುಬರುತ್ತವೆ. ಜನಾಂಗದ ವೀರಪುರುಷರಿಗೆ ಸಂಬಂಧಪಟ್ಟ ವೀರಕಾವ್ಯಗಳು ಇವೆ. ಅನೇಕ ಬಗೆಯ ತ್ಯಾಗ ಬಲಿದಾನದ ಕಥೆಗಳು ಇವೆ. ಧಾರ್ಮಿಕ ಸಂಪ್ರದಾಯಗಳಲ್ಲಿ ಆಚರಣೆ ವಿಧಿಗಳಲ್ಲಿ ಈ ಕಾವ್ಯಗಳನ್ನು ಪವಿತ್ರ ಕಾವ್ಯಗಳೆಂದು ಪರಿಗಣಿಸಿ, ಉಳಿಸಿಕೊಂಡು ಬಂದ ಪರಂಪರೆ ಇದೆ. ಈ ಕಾವ್ಯಗಳಲ್ಲಿ ಧಾರ್ಮಿಕ ಅಂಶಗಳ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಅಂಶಗಳು ಸೇರಿರುತ್ತವೆ. ಇಂತಹ ಒಂದು ಶ್ರೇಷ್ಠ ಕಾವ್ಯಗಳ ಸಾಲಿಗೆ "ಏಳೂರು ದೇವರ ಕಾಳಗ" ಕೂಡ ಸೇರಿರುತ್ತದೆ. ತರುಣ ವಿದ್ವಾಂಸರಾದ ಶ್ರೀ ರಾಜಪ್ಪ ದಳವಾಯಿಯವರು ಕೆಲವು ವರ್ಷಗಳ ಹಿಂದೆ ಈ ಕಾವ್ಯದ ಬಗ್ಗೆ ನನ್ನೊಡನೆ ಪ್ರಸ್ತಾಪಿಸಿದ್ದರು. ಸಾಂಸ್ಕೃತಿಕ ಮಹತ್ವದ ಈ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿ, ಅದರ ಸಂಪ್ರದಾಯವನ್ನು ಗುರುತಿಸಬೇಕೆಂದು ಅವರೊಡನೆ ನಾನು ಮಾತನಾಡಿದ್ದೆ. ಶ್ರೀಯುತರು ಈ ಕಾವ್ಯದ ಮೂಲ ಚೂಲಗಳನ್ನೆಲ್ಲ ಹುಡುಕಿ ಸಾಧ್ಯವಾದ ಮಟ್ಟಿಗೂ ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಸಂಗ್ರಹಕಾರ್ಯವನ್ನು ನಡೆಸಿದ್ದಾರೆ. ಈ ಕಾರ್ಯಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

ಈ ಕಾವ್ಯವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ವಾಣೀ ಪ್ರೆಸ್‌ನ ಶ್ರೀ ಎ. ಜಿ. ಸುಪ್ರತೀಂದ್ರ ಅವರಿಗೂ ರಕ್ಷಾಪುಟದ ಆಕರ್ಷಕ ಕಲೆಯನ್ನು ಬಿಡಿಸಿಕೊಟ್ಟ ತರುಣ ಕಲಾವಿದ ಕನಕೇಶ ಮೂರ್ತಿಯವರಿಗೂ ಕರಡು ತಿದ್ದುವುದರಲ್ಲಿ ನೆರವಾದ ಡಾ. ಅಕ್ಕಮಹದೇವಿಯವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

**ಜೀ. ಶಂ. ಪರಮಶಿವಯ್ಯ**

ಅವ್ವ
ಹನುಮಕ್ಕ
ಅಪ್ಪ
ರಾಮಣ್ಣ
ಅವರುಗಳಿಗೆ ಈ ಕೃತಿ ಅರ್ಪಿತ

# ನನ್ನೆರಡು ಸೊಲ್ಲುಗಳು....

ನಾನು ಸಣ್ಣವನಿದ್ದಾಗ ಕೇಳುತ್ತಿದ್ದ ಜನಪದ ಹಾಡು, ಕತೆಗಳಲ್ಲಿ ಈ ಏಳೂರು ದೇವರ ಕಾಳಗವೂ ಒಂದು. ಇದಕ್ಕೆ ಕಾಳಗದ ಪದ ಎಂದೂ ಕರೆಯುತ್ತಾರೆ. ಅಲ್ಲಲ್ಲಿ ಹಾಡಾಗಿ ಹೆಚ್ಚು ಕಥೆಯಾಗಿ ಇಂದಿಗೂ ನನ್ನೂರಿನಲ್ಲಿ ಬಹಳಷ್ಟು ಜನಕ್ಕೆ ಗೊತ್ತಿರುವ ಕಥೆ ಇದಾಗಿದೆ. ಶಿವನಿ ಸುತ್ತಮುತ್ತಲ ಪ್ರಾಂತದ ಕುರುಬರಲ್ಲಿ ಪ್ರಚಲಿತವಿರುವ ಈ ಲಾವಣಿ ಒಂದು ವೀರಗಾಥೆ. ಇದು ಒಂದು ಜನಾಂಗೀಯ ಉದ್ದೇಶಕ್ಕಾಗಿಯೆ ಹುಟ್ಟಿ ಬೆಳೆದು ಬಂದಿರುವಂಥದು. ಮುಖ್ಯವಾಗಿ ಕುರುಬರಲ್ಲಿರುವ ಒಳಸಂಬಂಧಿ ಕುಲಾಚಾರಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸುವುದಷ್ಟೆ ಅಲ್ಲದೆ ಇಲ್ಲಿ ಹೇಳಿರುವ ಆಚರಣೆಗಳಲ್ಲಿ ಕೆಲವು ಇಂದಿಗೂ ಜೀವಂತ ಇರುವುದನ್ನು ಗಮನಿಸಿದರೆ ಇದೊಂದು ಐತಿಹಾಸಿಕ ವಸ್ತು ಎಂಬುದರಲ್ಲಿ ಸಂದೇಹವಿಲ್ಲ.

ತಾಳೀಕಟ್ಟೆ ಹಿರಿಯಯ್ಯನ ಒಕ್ಕಲೊಂದು ಚನ್ನಗಿರಿ ಆಚೆಗಿರುವ ಆನವೇರಿಗೆ ಚದುರಿ ಹೋಗಿರುವಾಗ, ಹಿರಿಯಯ್ಯ ತನ್ನ ಬೆಸಮಗನನ್ನು ಕರೆದು, ಹೋದ ಒಕ್ಕಲನ್ನು ನೋಡಿ ಬಾ ಎಂದು ಕಳಿಸಿದರೆ ಆತ ಆ ಒಕ್ಕಲ ಹಿರಿಯನ ತಲೆಯನ್ನೇ ಕತ್ತರಿಸಿ ತಂದು ಆನವೇರಿ ಸಿದ್ದಯ್ಯ ಮತ್ತವನ ಹಿಂಬಾಲಕರ ಕೋಪಕ್ಕೆ ಗುರಿಯಾಗಿ ಗಡಿನಾಡ ವ್ಯಾಜ್ಯವನ್ನು ಕೆಣಕಿ ಬಂದ ಸಲುವಾಗಿ ತಾಳೀಕಟ್ಟೆ ಹಿರಿಯಯ್ಯ, ಆನವೇರಿ ಸಿದ್ದಯ್ಯ, ಮಮ್ಮಿ ಸಿದ್ದಯ್ಯ (ಮೋಟುಬಳ್ಳು ಚಿಕ್ಕಣ್ಣ ಎಂಬುದು ಇವನ ಇನ್ನೊಂದು ಹೆಸರು,) ಬನಿಹಟ್ಟಿ ಸಿದ್ದಯ್ಯ ಮುಂತಾದವರೆಲ್ಲ ಹೊನ್ನೇಬಾಗಿ ದಿಬ್ಬದಲ್ಲಿ ಪಂಚಾಯಿತಿ ಮಾಡುತ್ತಿರುವಾಗ, ಹೋದ ಒಕ್ಕಲನ್ನು ಬಿಡದಿದ್ದ ಹಿರಿಯಯ್ಯನ ಬಲಗೆಪ್ಪೆಯನ್ನು ಮೋಟುಬಳ್ಳು ಚಿಕ್ಕಣ್ಣ ಕಡಿಯಲಾಗಿ, ಪ್ರಜ್ಞೆ ತಪ್ಪಿಬಿದ್ದ ಹಿರಿಯಯ್ಯನ ಸುದ್ದಿ ತಿಳಿದು ಆತನ ಏಳುಜನ ತಮ್ಮಂದಿರೂ ಬಂದು ಆನವೇರಿ ಸಿದ್ದಯ್ಯನ ಸೊಕ್ಕು ಮುರಿದು ಬ್ಯಾಲನೂರ ಕುಟುಂಬದ ಆ ಒಂದು ಒಕ್ಕಲನ್ನು ಆನವೇರಿಯಿಂದ ತಾಳೀಕಟ್ಟೆಗೆ ಕರೆದು ತರುವ ವಿವರ ಈ ಲಾವಣಿಯಲ್ಲಿ ನಿರೂಪಿತವಾಗಿದೆ.

ಇದು ಮುಖ್ಯವಾಗಿ ವೀರರಸಪ್ರಧಾನವಾದ ಲಾವಣಿಯಾಗಿದ್ದು ಏಳೂರಿಗೆ ಸಂಬಂಧಿಸಿದ ದೇವರುಗಳ, ಕುರುಬರ ಒಳಪಂಗಡಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ. ಇದರಲ್ಲಿ ಒಳಕೆಯಾಗಿರುವ ಊರು, ವ್ಯಕ್ತಿ, ಸ್ಥಳ ಮತ್ತು ಘಟನೆಗಳು ಇಂದಿಗೂ ಜೀವಂತಿಕೆ ಪಡೆದವಾಗಿರುವುದರಿಂದ ಇದೊಂದು ಪ್ರಾದೇಶಿಕ ಆಶೋತ್ತರಗಳನ್ನು ತುಂಬಿಕೊಂಡಿರುವ ಜನಪದ ವೀರಕಾವ್ಯ ಎನಿಸುತ್ತದೆ. 'ಪಿರಿಯಾಪಟ್ಟಣ ಕಾಳಗ'ದ ಕತೆಗೆ ಹೆಚ್ಚು ಸಮೀಪವಿರುವ ಈ ಲಾವಣಿ ಒಂದು ಪ್ರದೇಶದ ಐತಿಹಾಸಿಕ ವಸ್ತುವಾದಂತೆಯೇ ಒಂದು ಜಾತಿಯ ಸಾಂಸ್ಕೃತಿಕ ವಿಚಾರಗಳನ್ನು ಸಹ ಬಿಂಬಿಸುವ ಶಕ್ತಿ

ಯನ್ನು ಪಡೆದಿದೆ. ಕುರುಬರ ಸಂಸ್ಕೃತಿಯ ಸಾಕಷ್ಟು ವಿಷಯಗಳು ಇಲ್ಲಿ ದಾಖಲಾಗಿವೆ. ಅಷ್ಟೇ ಅಲ್ಲ ಅವು ಇಂದಿಗೂ ಜೀವಂತವಾಗಿವೆ. ಇದು ಹಲವು ಒಕ್ಕಲುಗಳ ನಡುವೆ ನಡೆಯುವ ಒಂದು ಸಂಘರ್ಷವಾಗಿಯೂ ಬಿಂಬಿತವಾಗಿದೆ. ಯಾವುದೇ ಇತಿಹಾಸವಿಲ್ಲದ ಈ ಪ್ರದೇಶದ ಕುರುಬರಿಗೆ ಇದೊಂದು ಸಾಂಸ್ಕೃತಿಕ ಘನತೆಯೇ ಆಗಿದೆ. ಆದ್ದರಿಂದ ಈ ಏಳೂರು ಬುಡಕಟ್ಟುಗಳಲ್ಲಿ ಈ ಕತೆ ಒಂದಿಲ್ಲೊಂದು ರೂಪದಲ್ಲಿ ಜೀವಂತವಾಗಿದೆ.

ಈ ಲಾವಣಿಯಲ್ಲಿ ಹಲವು ಬಗೆಯ ಜನಪದ ಮಟ್ಟುಗಳು ಬಳಕೆಯಾಗಿವೆ. ಮುಮ್ಮೇಳ ಮತ್ತು ಹಿಮ್ಮೇಳದ ಜೊತೆ ನಡೆಯುವ ಈ ವೀರಗಾಥೆಗೆ ಅದರದೇ ಆದ ಐತಿಹ್ಯಗಳೂ ಇವೆ. ಇದನ್ನು ದೇವಸ್ಥಾನದಲ್ಲಲ್ಲದೆ ಬೇರೆಡೆ ಹಾಡಬಾರದು. ಇದನ್ನು ಕೇಳುತ್ತಿದ್ದರೆ ಏಳೂರಿನ ಯಾವ ದೇವರಾದರೂ ತನ್ನ ತೂಗೊ ಮಂಚದಲ್ಲಿ ತೂಗಾಡುತ್ತಿರುತ್ತದೆ, ಎಂಬಿತ್ಯಾದಿ ನಂಬಿಕೆಗಳು ಬಳಕೆಯಲ್ಲಿವೆ. ಈ ಲಾವಣಿಗೆ ಅದರವೇ ಆದ ಒಂದು ದೈವಿಕತೆಯನ್ನು ಜನ ಹೊರಿಸಿದ್ದಾರೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಈ ಏಳೂರುಗಳ ದೇವರ ಜಾತ್ರೆಗಳೂ ಬಹಳ ಪ್ರಸಿದ್ಧವಾದವು. ಇಲ್ಲಿ ಕುರುಬರ ಹಲವು ಬುಡಕಟ್ಟುಗಳ ಸಮ್ಮಿಳನದ ಒಂದು ಸಾಕ್ಷಿಯಾಗಿರುತ್ತವೆ.

ಕಿರಿಯರಲ್ಲಿನ ವೀರತೆಯನ್ನು ಈ ಲಾವಣಿ ಸುಂದರವಾಗಿ ಬಿಂಬಿಸುತ್ತದೆ. ದಳವಾಯಿ ತಿಮ್ಮಣ್ಣ, ಶಿವನೆ ನಿಂಗಣ್ಣ, ಮುಗುಳಿ ತಿಮ್ಮಣ್ಣ ಇವರು ಇಂಥ ವೀರಪ್ರದರ್ಶನಕ್ಕೆ ಸಾಕ್ಷಿಯಾಗಿದ್ದಾರೆ. ಒಂದು ಕಾಲದ ನಿಜಸಂಗತಿ ಜಾನಪದೀಯತೆಯನ್ನು ಪಡೆದಿರುವುದನ್ನು ಗಮನಿಸಿದರೆ, ಲಾವಣಿಯನ್ನು ಕಟ್ಟಿರುವ ವ್ಯಕ್ತಿಯ ಸಾಂಸ್ಕೃತಿಕ ಕ್ರಿಯಾಶೀಲತೆ ಎದ್ದು ಕಾಣುತ್ತದೆ. ಮುಖ್ಯವಾಗಿ ಇದೊಂದು ಸಮೂಹಸೃಷ್ಟಿ ರಚನೆ. ಇಲ್ಲಿ ಯಾರೊ ಒಬ್ಬ ವೀರನ ಕಥೆಯಷ್ಟೆ ಬರದೆ ಹಲವು ವೀರರ ಕಥೆಗಳು ಬರುತ್ತವೆ. ಈ ಹಿನ್ನೆಲೆಯಿಂದಲೂ ಲಾವಣಿಗೆ ಹೆಚ್ಚಿನ ಸ್ಥಾನಮಾನವಿದೆ. ಜನಾಂಗೀಯ ಸಮಸ್ಯೆಯು ಒಂದು ಸಾರ್ವತ್ರಿಕ ಸತ್ಯವಾಗಿ ಮಾರ್ಪಾಡಬಲ್ಲ ರೀತಿಯ ಇಲ್ಲಿನ ರಚನಾತಂತ್ರ ಬದುಕಿನ ಗಂಭೀರ ಕಾಳಜಿಗಳನ್ನು ಹೊತ್ತೆ ಸೃಷ್ಟಿಯಾದುದೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಹಲವು ಸಾಂಸ್ಕೃತಿಕ ವಿಚಾರಗಳನ್ನು ತನ್ನುದರದಲ್ಲಿಟ್ಟುಕೊಂಡಿರುವ ಈ ಕೃತಿ ಕನ್ನಡ ಜನಪದ ಲಾವಣಿಗಳ ಸಾಲಿನಲ್ಲಿ ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸಬಲ್ಲದೆಂದು ನಂಬಬಹುದಾಗಿದೆ.

೨

ಅಲ್ಲಲ್ಲಿ ಅಲ್ಪ ಸ್ವಲ್ಪ ಕೇಳಿದ ಈ ಕಥೆ ಆಗಾಗ್ಗೆ ಹಲವು ಕಾರಣಗಳಿಂದಾಗಿ ನೆನಪಾಗುತ್ತಿತ್ತು. ಒಂದು ರೀತಿಯಲ್ಲಿ ನನ್ನ ಸೃಜನತೆಯನ್ನು ಎಚ್ಚರಗೊಳಿಸುವ ಕೆಲಸವನ್ನೂ ಇದು ಮಾಡಿದೆ. ನಾನು ೧೯೮೫ರಲ್ಲಿ ಜಾನಪದದಲ್ಲಿ ಸ್ನಾತಕೋತ್ತರ ಡಿಪ್ಲೊಮ ಅಧ್ಯಯನ ಮಾಡುವಾಗ ಇದರ ಸಂಪೂರ್ಣ ಸಂಪಾದನೆಗೆ ಕ್ಷೇತ್ರಕಾರ್ಯವನ್ನು ಕೈಗೊಂಡೆ. ಇದು ನನಗೆ ಜನರ ಸಂಸ್ಕೃತಿಯ ಕ್ರಿಯಾಶೀಲತೆಯ ಹಲವು ಪಾಠಗಳನ್ನು ಕಲಿಸಿಕೊಟ್ಟಿತು. ಈ ಕಾರ್ಯ ಜನರ ಬದುಕನ್ನು ಹತ್ತಿರದಿಂದ ತೋರಿಸಿದ್ದಷ್ಟೇ ಅಲ್ಲದೆ ಸಾಂಸ್ಕೃತಿಕ

ವಿಚಾರಗಳ ಬಗ್ಗೆ ಹೊಸ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು.

ನನ್ನಿಂದ ಇಂತಹದೊಂದು ಕಾರ್ಯವನ್ನುಮಾಡಿಸಿದ ಡಾ. ಜೀ.ಶಂ. ಪರಮಶಿವಯ್ಯ ಸುಧಾಕರ, ರಾಗೌ, ಡಿ.ಕೆ. ರಾಜೇಂದ್ರ, ಅಂಬಳಿಕೆ ಹಿರಿಯಣ್ಣ, ಹಿ. ಶಿ. ರಾಮಚಂದ್ರೇ ಗೌಡ ಮತ್ತು ಗೆಳೆಯರೂ ಜಾನಪದ ವಿದ್ವಾಂಸರೂ ಆದ ರಂಗಾರೆಡ್ಡಿ ಕೋಡಿರಾಂಪುರ ಅವರಿಗೂ ಈ ಕಾವ್ಯ ಸಂಗ್ರಹಕಾರ್ಯದ ಸಂದರ್ಭದಲ್ಲಿ ನನ್ನೊಂದಿಗಿದ್ದು ನನ್ನ ಕಿರುಕುಳಗಳನ್ನು ಸಹಿಸಿ ಸಹಕರಿಸಿದ ಮಿತ್ರ ಎಲ್. ನಾಗರಾಜು ಮತ್ತು ಮಾವನವ ರಾದ ತಾಳೀಕಟ್ಟೆ ಪುಟ್ಟಪ್ಪ ಮಾಸ್ಟರಿಗೂ, ತಮ್ಮ ದೈನಂದಿನ ಕೂಲಿನಾಲಿಯ ಹೊತ್ತಿ ನಲ್ಲೂ ತಾವು ಕಲಿತಿದ್ದ ಈ ಕಾಳಗದ ಪದವನ್ನು ಯಾವುದೇ ಚೌಕಾಸಿಯಿಲ್ಲದೆ ಹಾಡಿ ಪುಸ್ತಕದ ಈ ರೂಪಕ್ಕೆ ಅನುಕೂಲ ಮಾಡಿಕೊಟ್ಟ ತಾಳೀಕಟ್ಟೆ ಕುಲ್ಡವ್ವ, ರಾಮಕ್ಕ, ಸತ್ಯವ್ವ ಮತ್ತು ಸಿದ್ದವ್ವ ಅವರುಗಳಿಗೂ ಈ ಕೃತಿಯನ್ನು ಪ್ರಕಟಿಸುವ ಜವಾಬ್ದಾರಿ ಯನ್ನು ಸಂತೋಷದಿಂದ ಹೊತ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ಜೀ. ಶಂ. ಪರಮಶಿವಯ್ಯ ಮತ್ತು ಅದರ ಸದಸ್ಯರು ಗಳಿಗೂ ಅಚ್ಚುಕಟ್ಟಾಗಿ ಮುದ್ರಿಸಿದ ವಾಣೀ ಪ್ರೆಸ್, ಚಾಮರಾಜಪುರಂ, ಮೈಸೂರು ಇವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ರಾಜಪ್ಪ ದಳವಾಯಿ

೦೯–೦೩–೧೯೯೪
ಕನ್ನಡ ಅಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

# ಏಳೂರು ದೇವರ ಕಾಳಗ

ಸೊಲ್ಲು ಸೊಲ್ಲೀಗೆ ಬಲ್ಲೋಳ ನೆನವೇನು
ಎಳ್ಳು ಜೀರೀಗೆ ಬೆಳೆವೋಳ_ಭೂಮಿತಾಯಿ
ಬಲ್ಲೋಳ ಮೊದುಲೆ ನೆನದೇನು

ಮಾತು ಮಾತಿಗೆ ಕಾತೀಯ ನೆನದೇನ
ಕಾತ ಜೀರೀಗೆ ಬೆಳೆವೋಳ_ಭೂಮಿತಾಯಿ
ಮಾತು ಮಾತೀಗೆ ನೆನದೇನ

ದುಡ್ಡಿನ ದೂಪಾನಕಿ ದೊಡ್ಡೋನ ನೆನದೇನ
ದೊಡ್ಡೂರ ಗ್ರಾಮಾದ ಒಡೆಯ_ಹಿರಿಯಯ್ಯನ
ದೊಡ್ಡೋನ ಮೊದುಲೆ ನೆನದೇನು

ಮೊದುಲೆ ಸೊಲ್ಲೀಗೆ ಮುನಿಸ್ವಾಮಿ ನೆನದೇನ
ಮುನಿಮಕ್ಕಳೆಲ್ಲೊ ಸಲವೋನ–ಹಿರಿಯಯ್ಯನ
ಮೊದುಲೆ ಸೊಲ್ಲೀಗೆ ನೆನದೇನ

ಕಣಗಾಲ ಹೂವು ಕೈತುಂಬ ನಾ ಕೊಯ್ಯುವೆ
ಕಣಿವೆ ಈರಣಗೆ ನಮುಸೂವೆ–ನಮುದಣಿ
ಕಲಿಯಾಗಿ ಬರುಲೆ ಸಬಿಯಾಗೆ

ಮುಗ್ಗಾಲ ಹೂವು ಮುಗ್ಗು ಮುಗ್ಗು ನಾ ಕೊಯ್ಯುವೆ
ಹಿಗ್ಗಣೇಶ್ವರಗೆ ನಮುಸೂವೆ_ನಮುದಣಿ
ಕುಗ್ಗದಲೆ ಬರಲೆ ಸಬಿಯಾಗೆ

ಬಲಬಂಡೆ ಯೆಂಗಿಯೋ ಬಲಬಂಡೆ ಬಿಂಗಿಯೋ
ಬಲಬಂಡೆ ಹೊನ್ನು ಹಲಗೇಯ–ಹಿರಿಯಯ್ಯನ
ಬಲಬಂಡಿ ಪದವ ನಡಸೂವೆ

ಬಾರದ ಪದವ ಹೇಳಿ ನೀ ಬರಕೊಡೋ
ಹೇಳಿ ಬರಕೊಡೋ ಹಿರಿಯಯ್ಯ–ನಾ ನಿನಗೆ
ನಲವತ್ತೆ ಸಾರಿ ಶರಣಾರ್ಥಿ

ತಪ್ಪೀದ ಪದ ನನಗೆ ತಿದ್ದಿ ನೀ ಬರಕೊಡೋ
ತಿದ್ದಿ ಬರಕೊಡೋ ಹಿರಿಯಯ್ಯ–ನಾ ನಿನಗೆ
ಯೆಂಬತ್ತು ಸಾರಿ ಶರಣಾರ್ಥಿ

ತಪ್ಪೀದ ಪದ ನನಗೆ ತಿದ್ದಿ ನೀ ಕೊಡಪ್ಪ
ತಿದ್ದಿ ಬರಕೊಡೋ ಹಿರಿಯಯ್ಯೋ–ನಾ ನಿನಗೆ
ತೊಂಬತ್ತೆ ಸಾರಿ ಶರಣಾರ್ಥಿ

ಕಾಳುಗದ ಕತಿಯೋ ಗ್ಯಾನವುಳ್ಳರೆ ಕೇಳ್ರಿ
ಗ್ಯಾನವುಳ್ಳೋರೆ ಹಿರಿಯೋರೆ–ಕೇಳಿದುರೆ
ನಾಳಿ ನಿಮ್ಮ ಚಿಂತೆ ಪರಿಹಾರೊ

ಗದ್ದೀಗಿ ಹಾಡೋ ಮತಿಯ ಬಲ್ಲೋರೆ ಕೇಳ್ರಿ
ಮತಿಯ ಬಲ್ಲೋರೆ ಹಿರಿಯೋರೆ–ಕೇಳಿದುರೆ
ಮತು ನಿಮ್ಮ ಚಿಂತೆ ಪರಿಹಾರೊ

ಕಾಳುಗದ ಕತಿಯೋ ಘನವಾಗಿ ಕೇಳೀರಿ
ಗ್ಯಾನಬಿಟು ಪರಗ್ಯಾನದಿಂದ ಕೇಳಿದೋರಿಗೆ–ತಾಳೀಕಟ್ಟಿ
ಹಿರಿಯಯ್ಯ ಕ್ವಾಲ್ಡು ಗುಳ ಹಿಡಿದೆದ್ದ

ಗದ್ದೀಗಿ ಹಾಡೋ ಮತಿಯ ಬಲ್ಲೋರೆ ಕೇಳ್ರಿ
ಮತಿಬಿಟ್ಟು ಪರಮತಿಯಿಂದ ಕೇಳಿದೋರಿಗೆ–ತಾಳೀಕಟ್ಟಿ
ಮಾರಯ್ಯ ಕ್ವಾಲ್ಡು ಗುಳ ಹಿಡಿದೆದ್ದ

ಹಂಚೀಯ ಹುಲ್ಲಾಗೆ ಹೊಂಚಾಡರ್‍ಯಾರವ್ವೊ ತಾನಂದನ್ನಾನ
ಗೊಂಚಾಲ ಕಿವಿಯ ದಳವಾಯಿ–ತಿಮ್ಮಣ್ಣ
ಹೊಂಚಾಡಿ ಹುಲಿಯ ಹೊಡುದಾನೆ

ಆಪಿನುಲ್ಲಾಗೆ ಆತಾಡರ್‍ಯಾರವ್ವ
ಚೌಕೂಳಿ ಕಿವಿಯ ದಳವಾಯಿ–ತಿಮ್ಮಣ್ಣ
ಆತಾಡಿ ಹುಲಿಯ ಹೊಡುದಾನೆ

ಬಾಗೆ ಹುಲ್ಲಾಗೆ ಬಾಗ್ಯಾಡರ್‍ಯಾರವ್ವ
ಬಾಬಾಲಿ ಕಿವಿಯ ದಳವಾಯಿ–ತಿಮ್ಮಣ್ಣ
ಬಾಗ್ಯಾಡಿ ಹುಲಿಯ ಹೊಡುದಾನೆ

ಹೆಬ್ಬಾಗಲಾಗೆ ಅಬ್ಬರಸರ್‍ಯಾರವ್ವ
ಒಬ್ಬ ತಾಯಿಗೊಬ್ಬ ಮಗನಂತೆ–ತಿಮ್ಮಣ್ಣ
ಅಬ್ಬುರಿಸಿ ಹೊಡೆದ ಹುಲಿಗಾಳ

ಗಿಡ್ಡರಸು ತಿಮ್ಮಣ್ಣೋ ಗಿಡಗನ ಬ್ಯಾಟೇ ವ್ವಾದ
ಮದನಾರಿ ಸೂಳೆ ಮರನೇರಿ–ಕೇಳ್ಯಾಳಲ್ಲೇ
ಗಿಡ್ಡರಸು ಯಾರಾ ಮಗನಯ್ಯ

ಗಿಡ್ಡರಸು ಯಾರ ಮಗನಯ್ಯ ತಾಳೀಕಟ್ಟೆ
ರಾಯ ಬ್ಯಾಲನೂರ ಮಗನಂಡ

ಆಲದರಿವೆ ಹೊದ್ದು ಇವಬಂಡ ದಳವಾಯಿ
ಇವಂಕೇಳಿರವರು ಕೊಲಗಾಳ–ತಾಳೀಕಟ್ಟೆ
ಸೆಟ್ಟೆ ಬ್ಯಾಲನೂರ ಮಗನಂತೆ

ತುಪ್ಪದರಿವೆ ಹೊದ್ದು ರಟ್ಟೇ ತಿರುವೂತ ಬಂದ
ಮತು ಕೇಳೀರವರು ಕೊಲಗಳ–ತಾಳೀಕಟ್ಟೆ
ಸೆಟ್ಟೆ ಬ್ಯಾಲನೂರ ಮಗನಂತೆ

ಹತ್ತಾಳಿನೊಳಗೆ ಸಕ್ಕಾರ ಮೂಡಿದಂಗೆ
ತುಂಬಿಟ್ಟರ್‍ಯಾರೆ ಪದುಕಾವೆ–ಬ್ಯಾಲನೂರ
ಆಳಿನಾಗುಳ ತಿಮ್ಮಣ್ಣ ಚೆಲುವಾನೆ

ಹತ್ತಾಳಿನೊಳಗೆ ತೋರಿಟ್ಟರ್‍ಯಾರವ್ವ
ತೋರಿಟ್ಟರ್‍ಯಾರೆ ಪದುಕಾವೆ–ಬ್ಯಾಲನೂರ
ಮುಂದ್ಯಗುಳ ತಿಮ್ಮಣ್ಣ ಚೆಲುವಾನೆ

ಕರಿಯ ಕಂಬಳಿ ಹೊದ್ದು ದುರುಗಾದ ಕೋಲಿಡುದು
ಕುರಿಯ ಹಿಂಡಿನಾಗೆ ಬರುವೊ—ದಳವಾಯ್ ತಿಮ್ಮಣ್ಣಗೆ
ಎಂಥೋರೆ ಕಯ್ಯ ಮುಗುದಾರೆ

ಮಬ್ಬುಗಂಬಳಿ ಹೊದ್ದು ಬಾರಿ ಕೋಲಾ ಹಿಡುದು
ಮುಂದಾಲಿಂಡಿನಾಗೆ ಬರುವೋ—ತಿಮ್ಮಣ್ಣಾಗೆ
ದೊಡ್ಡೋರೆ ಕಯ್ಯ ಮುಗುದಾರೆ

ಸ್ವಾಮಿ ತಿಮ್ಮಣ್ಣನ ಪಾಪ್ರುಡು ಪಲ್ಲೇವಾಡು
ಆಳಾಗುಳ ಜಲ್ಲೆ ಮರಿಜಲ್ಲೆ—ಬಂಕನಕಟ್ಟೆ
ಹಾದ್ಯಾಗ ತಾನೇ ಮಡುದಾನೆ

ಅಪ್ಪಾ ತಿಮ್ಮಣುನೋ ಪಟ್ಟೆ ಪಲ್ಲೇವಾಡು
ತುಪ್ಪಾಗುಳ ಜಲ್ಲೆ ಮರಿಜಲ್ಲೆ—ಬಂಕನಕಟ್ಟೆ
ಹಟ್ಟ್ಯಾಗೆ ತಾನೇ ಮಡುದಾನೆ

ಹಟ್ಟ್ಯಾಗೆ ತಾನೇ ಮಡುದಾನ್ ಬ್ಯಾಲನೂರ
ವ್ವಾದ ವಕ್ಕಾಲ ಕರಿಯಾಕೆ—ತಿಮ್ಮಣ್ಣ
ತಂದೆ ಹಿರಿಯಯ್ಯನ ಕೇಳುತಾನೆ

ತಂದೆ ಹಿರಿಯಯ್ಯೋ ಕೇಳ್ಯಾನೆ ದಳವಾಯಿ
ತಂದೆ ವಕ್ಕಾಲ ಕರುತಾರೋ

ಸಣ್ಣೋನು ದಳವಾಯಿ ಮತ್ತೆಲ್ಲಿ ಹೊರಟಾನು
ಅವರಪ್ಪನೊಕ್ಕಾಲ ಹುಡುಕೂತ—ದಳವಾಯಿ
ಶಂಕು ಬವನಾಸಿ ಹೆಗಲೇರಿ

ಶಂಕು ಬವನಾಸಿ ಹೆಗಲೇರಿ ದಳವಾಯಿ
ಆನವೇರಿ ದಾರಿ ಹಿಡುದಾನೆ

ಕರಿಗಲ್ಲು ಹಿಟ್ಟಾದು ಕಗ್ಗಲ್ಲು ಪುಡಿಯಾದು
ಸರಿಯಾದ ಮರವೇ ಬಯಲಾದು—ತಿಮ್ಮಣ್ಣ
ವ್ವಾದ ವಕ್ಕಾಲ ಹುಡುಕೂತ

ವಾದ ವಕ್ಕಾಲ ಹುಡುಕೂತ ದಳವಾಯಿ
ತಿಮ್ಮಣ್ಣ ಬರುವೋ ರಭಸಾಕೆ–ಆಗಿನ್ನು
ಬಂದಾನಾನ್ವೇರಿ ಎಡಬಲಕೆ

ಮಬ್ಬುಗಂಬಳಿ ಹೊದ್ದು ದುಂಡು ನಾಮಾನಿಟ್ಟು
ಬಾರೀಯ ದೊಣ್ಣೆ ಬಲಗೈಲಿ–ತಿಮ್ಮಣ್ಣ
ಹೊಕ್ಕಾನಾನ್ವೇರಿ ಒಳವೀಗೆ

ಒಕ್ಕಾನಾನ್ವೇರಿ ಒಳವೀಗೆ ತಿಮ್ಮಣ್ಣ
ಅವರಪ್ಪಾನೊಕ್ಕಾಲ ಹುಡುಕೂತ

ಕರಿಯ ಕಂಬಳಿ ಹೊದ್ದು ನೀಳ ನಾಮಾನಿಟ್ಟು
ಬಲವೀನ ದೊಣ್ಣೆ ಬಲಗೈಲಿ–ತಿಮ್ಮಣ್ಣ
ವಾದಾನಾನ್ವೇರಿ ಒಳವೀಗೆ

ವಾದಾನಾನ್ಯೇರಿ ಒಳವೀಗೆ ದಳವಾಯಿ
ವಾದಾವಕ್ಕಾಲ ಹುಡುಕೂತ–ತಿಮ್ಮಣ್ಣ
ಪಟ್ಟಾಣನೆಲ್ಲಾ ಹುಡುಕ್ಯಾನೆ

ಆನವೇರಿ ಪಟ್ಟಾಣ ಹುಡುಕ್ಯಾನೆ ದಳವಾಯಿ
ಅವನಪ್ಪಾನೊಕ್ಕಾಲೆ ಸಿಗಲಿಲ್ಲೊ–ದಳವಾಯಿ
ಅಲ್ಲೊಂದು ರಾತ್ರಿ ಉಳುದಾನೆ

ಬೆಳ್ಳನ್ನ ಬೆಳಕರುದು ಬೆಳ್ಳಿದೇವರು ಮೂಡಿ
ಬೆಳಗೀನ ಪಾರೆ ಬರುತಾನೆ

ಕೇರಿ ಕೇರಿಗುಂಟೆ ದಳವಾಯಿ ತಿಮ್ಮಣ್ಣ
ವಕ್ಕಾಲುಡುಕೂತ ಬರುತಾನೆ

ಗುದ್ದಿ ಸಿಂಗಣುನೋ ಹಿರಿಸ್ವಾಸೆ ತಾಯವ್ವ
ರಾಗಿಕಲ್ಲೀಗೆ ರಾಗಾವ–ಪಾಡ್ಯಾಳೆ
ಹಿರಿಯಯ್ಯನ ಪದವೋ ಹೇಳುತಾಳೆ

ಗಂಡನ ಮನಿಯಾ ಸ್ವಾಮಿ ಗಂಡು ಮಕ್ಕಳ ಕೊಡೋ
ಚೆಂಡುವ್ವಿಗಿನ್ನ ಚೆಲುವಾರ–ಕೊಟ್ಟಾರೆ
ಇಲ್ಲಿಂದ ಕಯ್ಯ ಮುಗುದೇನು

ಇಲ್ಲಿಂದ ಕಯ್ಯ ಮುಗುದೇನು ಬೀರೇಶ
ಮಂಡಕ್ಕಿ ತೇರ ಹರಸೂವೆ–ಹಿರಿಯಯ್ಯ
ಬಂಜೆಂಬ ಸೊಲ್ಲ ಬಿಡಿಸಯ್ಯೋ

ಹಿರಿಯಯ್ಯೆಂಬೊ ಸೊಲ್ಲ ತಿಮ್ಮಣ್ಣ ಕೇಳ್ಯಾನೆ
ಬಚ್ಚ್ಯಾಲ ಕಂಡೀಗೆ ಬರುತಾನೆ–ತಿಮ್ಮಣ್ಣ
ತಂದೇಯು ಪದವಾ ಕೇಳುತಾನೆ

ಹಿರಿಯ ಎಂಬ ಸೊಲ್ಲ ಕೇಳ್ಯಾನೆ ತಿಮ್ಮಣ್ಣ
ನೋಡುತಾನೆ ಅವರೊ ಮನಿವಾರು–ತಿಮ್ಮಣ್ಣ
ಗುದ್ದಿ ನಿಂಗಣನಾ ಅರಮನೆ

ಗುದ್ದಿ ನಿಂಗಣ್ಣುನ ಅರಮಾನೆ ನೋಡಿಕ್ಯಂಡು
ತಂದೆ ವಕ್ಕಾಲು ಸಿಗತಂದ–ಬೀರೇಶ
ಅಲ್ಲೊಂದು ರಾತ್ರೆ ಉಳುದಾನೆ

ಸಕ್ಕೂರ ಮೂಡಿ ಆರು ತಾಸಾದಾವು
ದಳವಾಯ್ ತಿಮ್ಮಣ್ಣ ಬರುತಾನೆ

ಶಂಕೂನೆ ಬವನಾಸಿ ಜಾಗಟೆ ಹೆಗಲೇರಿ
ಗುದ್ದಿ ನಿಂಗಣನೊ ಅರಮಾನೆ–ಬಾಗುಲ ಮುಂದೆ
ಬೋರ್ಯಾಡಿ ಸಂಕು ಹಿಡುದಾನೆ

ಬೋರ್ಯಾಡಿ ಸಂಕು ಹಿಡುದಾನೆ ದಳವಾಯ್ ತಿಮ್ಮಣ್ಣ
ಸಂಕಿಡುದೆ ಜಾಗಟೆ ಬಡುದಾನೆ

ಗುದ್ದಿ ನಿಂಗಣ್ಣ ಹಿರಿಸ್ವಾಸೆ ಕರುದಾನೆ
ದಾಸಯ್ಯಗೆ ಪಡಿಯಾ ನೀಡುಬಾರೆ

ಮುತ್ತಿನ ಮರುದಾಗೆ ಪಡಿಗಾಳ ತಕ್ಕೊಂಡು
ದಾಸಯ್ಯಗೆ ಪಡಿಯಾ ನೀಡುತಾಳೆ

ಮುಂದಾಲ ಬಾಗುಲೀಗೆ ನೀಡಾಕೆ ಬಂದಾರೆ
ದಾಸಯನ ಸುಳವೇ ಇಲವಂತೆ–ಅವನೀಗ
ಹಿಂದಿಲ ಬಾಗಲಾಗೆ ಬರುತಾನೆ

ಹಿಂದಲ ಬಾಗುಲಾಗೆ ದಳವಾಯ್ ತಿಮ್ಮಣ್ಣ
ಬೋರ್ಯಾಡಿ ಸಂಕು ಹಿಡುದಾನೆ

ಆವ ಬಾಗುಲಾಗಿಲ್ಲೋ ಮುಂದಲ ಬಾಗುಲಾಗಿಲ್ಲೋ
ದಳವಾಯ್ ತಿಮ್ಮಣ್ಣನ ಸುಳಿವಿಲ್ಲೋ

ದಾಸಯ್ಯನ ಸುಳುವು ಇಲವಂತೆ ಆಗಿನ್ನು
ಗುದ್ದಿ ನಿಂಗಣಗೆ ಹೇಳುತಾಳೆ

ಗುದ್ದಿ ನಿಂಗಣ್ಣನ ಹಿರೆಸ್ವಾಸೆ ತಾಯವ್ವ
ಕುರಿಗೀಗ ಬುತ್ತಿ ಒಯುತಾಳೆ–ತಿಮ್ಮಣ್ಣ
ಹಿಂಬಾಲ ಹಿಡುದೇ ಹೋಗುತಾನೆ

ಹಿಂಬಾಲ ಹಿಡುದೇ ವಾದಾನೆ ತಿಮ್ಮಣ್ಣ
ಕುರಿಯ ಹಿಂಡಿನಾಗೆ ಬರುತಾನೆ

ಮಬ್ಬುಗಂಬಳಿ ಹೊದ್ದು ತುಂಡು ನಾಮಾನಿಟ್ಟು
ಹಿಂಬು ನೋಡುತಾನೆ ಹಗಲೆಲ್ಲಾ

ಕರಿಯ ಕಂಬಳಿ ಹೊದ್ದು ದುರುಗಾದ ಕೋಲಿಡುದು
ತಾವು ನೋಡುತಾನೆ ಹಗಲೆಲ್ಲಾ–ದಳವಾಯಿ
ಕುರಿಯ ಹಿಂಡಿನಾಗೆ ಬರುತಾನೆ

ಅಂಡಾರು ಸಾವೂರೊ ಗುಂಡಾರು ಸಾವೂರೊ
ಗುಂಡುದಗರಿನ ಶಿರವೋ ಹರುದಾನೆ–ದಳವಾಯಿ
ಕಳ್ಳುಪಚ್ಚಿಗುಳ ಸುರಿಸ್ಯಾನೆ

ಕಳ್ಳುಪಚ್ಚಿಗುಳ ಸುರಿಸ್ಯಾನೆ ದಳವಾಯಿ
ಜಂಗಮರ ಕೇರೀಗೆ ಎಸುದಾನೆ

ಅಂಡಾರು ಸಾವೂರೊ ಗುಂಡಾರು ಸಾವೂರೊ
ಗುಂಡುದಗರಿನ ಶಿರವೊ ಹರುದಾನೆ–ತಿಮ್ಮಣ್ಣ
ಲಿಂಗವಂತರ ಕೇರೀಗೆ ಎಸುದಾನೆ

ಹತ್ತೂ ಸಾವೂರಿಂಡೊ ಐದು ಸಾವುರ ಮಾಡಿ
ಕುರಿಯ ಹಿಂಡುನೆಲ್ಲಾ ಹಳುದಾನೆ

ಆರು ಸಾವೂರಿಂಡೊ ಮೂರು ಸಾವೂರ ಮಾಡಿ
ಮರಿಯ ಹಿಂಡುನೆಲ್ಲಾ ಹಳುದಾನೆ

ಗುದ್ದಿ ನಿಂಗಣ್ಣನ ಕುರಿಗಾಳ ಹಳುದಾನೆ
ಎಮ್ಮೆ ಕಾಲಾಗೆ ಬರುತಾನೆ

ಸ್ವಾಮಿ ಮುಣುಗ್ಯಾನೆ ಮುಳುಚಂಜೆ ಆದಾವು
ದನವೀನ ಕಾಲಾಗೆ ಒಳಹೊಕ್ಕ

ಎಮ್ಮೇಯ ಕೆಚ್ಚಲಾಗೆ ಹಿಪ್ಪೇಯ ನೊಣವಾಗಿ
ಹಿಂದಲಕ್ಕೀಗೆ ವ್ವಾದಾನೆ—ದಳವಾಯಿ
ಹಿಂದಲಕ್ಕ್ಯಾಗೆ ನೆಲಿಗೊಂಡ

ಚಂಜಿ ಕಸವಹೊಡಿಯೇ ನಂದದೀವಿಗೆ ಹೊಚ್ಚಿ
ಹೊಚ್ಚಿ ಹಿರಿಯಯ್ಯನ ಅರಮನಿಗೆ

ಪಚ್ಚೇಯ ಹಣತೀಗೆ ಪದುಮದ ಬತ್ತೀ ಹಾಕಿ
ಹೊಚ್ಚೀ ಬೀರೇಶನ ಅರಮನಿಗೆ—ಅಂದೇಳಿ
ಗುದ್ದಿ ನಿಂಗಣ್ಣೋ ಹೇಳುತ್ತಾನೆ

ಹಿರಿಯಾನೆ ಮಗನೀಗೆ ಏನೆಂದು ಹೇಳ್ಯಾನೆ
ಕರುಬಿಟ್ಟು ಹಾಲ ಕರಿ ಮಗುನೆ—ಅಂದೇಳಿ
ತಂದೆ ನಿಂಗಣ್ಣ ಹೇಳುತಾನೆ

ತಂದೆ ಹೇಳಿದ ಮಾತು ಕೇಳ್ಯಾನೆ ಹಿರಿಯಾ ಮಗ
ಕರುಬಿಟ್ಟು ಹಾಲೂ ಕರುದಾನೆ—ಆಗಿನ್ನು
ಏಳೆಮ್ಮೆ ರೈತ ಕರುದಾವೆ

ಏಳೆಮ್ಮೆ ರೈತ ಕರುದಾವೆ ತಂಬೀಗೆ
ತಂದೆ ಮಂಚಾಕೆ ಇಡುತಾನೆ

ತಂದೆ ಮಂಚಾಕೆ ಇಟ್ಟಾನೆ ನಿಂಗಣ್ಣ
ತಂಬೀಗೆ ನೋಡಿ ತಲೆದೂಗಿ—ನಿಂಗಣ್ಣ
ಏನೆಂದು ಆಗ ಹೇಳುತಾನೆ

ಗಾಡಿಕಾರ ದಾಸ ಬಂದಿದ್ದ ನೀವೀಗ
ದಾಸನೆಲ್ಲಿದ್ದ ಹುಡಕೀರಿ

ಮೂಡಲ ಸೀಮ್ಯಾನು ಗಾಡಿಕಾರ ದಾಸಾ ಬಂದು
ಕೇಡು ತಂದು ಎಳುದ ನಸಮನಿಗೆ–ನೀವೀಗ
ದಾಸನೆಲ್ಲಿದ್ದ ಹುಡುಕೀರಿ

ಅಲ್ಲೀನೆ ಹುಡುಕ್ಯಾರು ಇಲ್ಲೀನೆ ಹುಡುಕ್ಯಾರು
ಪಟ್ಟಾಣನೆಲ್ಲೋ ಹುಡುಕ್ಯಾರೆ–ಅವರೀಗೆ
ದಾಸಯ್ಯನ ಸುಳವೇ ಸಿಗಲಿಲ್ಲ

ದಾಸಯ್ಯನ ಸುಳವೇ ಸಿಗಲಿಲ್ಲ ತಿಮ್ಮಣ್ಣ
ಹಿಂದಲಕ್ಕ್ಯಾಗೆ ಇರುತಾನೆ

ಉಂಡುಟ್ಟು ಅವರೆಲ್ಲ ಸಡುಗೂರ ಸಂಪತ್ತು
ಸಡಗರದ ನಿದ್ದ್ರೇ ಮಾಡುತಾರೆ

ಗುದ್ದಿ ನಿಂಗಣ್ಣೋ ಸಾಲಿ ಮಂಚದ ಮ್ಯಾಲೆ
ಸಾಲಿ ಮಂಚದಲೇ ಮಲಗ್ಯಾನೆ

ನಾಕು ಮೂಲೇಗೂ ನಾಕು ನಂದಾದೀವಿಗೆ ಬೆಳಕು
ಗುದ್ದಿ ನಿಂಗಣುಗೇ ಸುಕ ನಿದ್ರೇ–ಮಾಡುವಾಗ
ಹಿಂದಲಕ್ಕಿಂದ ಬರುತಾನೆ

ಹಿಂದಲಕ್ಕಿಂದ ಬಂದಾನೆ ದಳವಾಯಿ
ಗುದ್ದಿ ನಿಂಗಣುನೊ ಸಿರಗಾಳು–ಕೊಯುಕೊಂಡು
ಕಕ್ಕೊಸ್ತ ವಳಗೇ ಇಟಗಂಡ

ಕಕ್ಕೊಸ್ತ ವಳಗೇ ತಲಿಗಾಳ ಇಟಗಂಡು
ಕೂಗಾಕಿ ಕ್ವಾಟೆ ಹತ್ತುತಾನೆ

ಕ್ವಾಟೇಯು ಮ್ಯಾಲೆ ಕುತುಕೊಂಡು ದಳವಾಯಿ
ಏನಂದೇ ಆಗ ನುಡುದಾನೆ

ಕಳ್ಳಾನಂದೀರಿ ನನ್ನ ಸುಳ್ಳಾನಂದೀರಿ ನನ್ನ ತಾನಂದನ್ನಾನ
ಹಿರಿಯುಯ್ಯನ ಮಾನೆ ಬೆಸುವಾಗ–ನಾನೀಗ
ನಮ್ಮಪ್ಪನ ತಲಿಯು ಒಯ್ತೀನಿ

ಕಾಣೆ ಅಂದಿರಿ ನೀವು ಕಂಡೆ ಅದಿರಿ ನೀವು
ಕೆಂಚಯ್ಯನ ಮಾನಿ ಬೆಸುಮಾಗ–ನಾನೀಗ
ಆಗದೋರ ತಲೆಯ ಒಯ್ತೀನಿ

ಆಗದೋರ ತಲಿಯ ಒಯ್ತೀನಿ ಅಂತೇಳಿ
ಕೂಗಾಕಿ ಕ್ವಾಟಿ ದುಮುಕ್ಯಾನೆ

ಕೂಗಾಕಿದ ಸಬುದ ಆನವೇರಿ ಸಿದ್ದಯ್ ಕೇಳಿ
ಪಟ್ಟೋಣದ ಜನರೇ ಹೇಳುತಾರೆ

ಹಕ್ಕಿ ಹಾರದು ಕ್ವಾಟಿ ಬೆಕ್ಕು ನುಶಿಯದ ಬೇಲಿ
ರಕ್ಕುಸನ ಕ್ವಾಟಿ ರಣಗ್ವಾಟಿ–ಹೊರಬಂದು
ಹೀಗೋಯ್ದ್ರ್ಯಾರೆ ಅವ್ರ ತಲಿಗಾಳ

ಹದ್ದು ಹಾರದ ಕ್ವಾಟಿ ಇರುವೆ ನುಶಿಯದ ಬೇಲಿ
ರಾವುಣನ ಕ್ವಾಟಿ ರಣಗ್ವಾಟಿ–ಹೊರಬಂದು
ಮತ್ತೊಯ್ದ್ರ್ಯಾರೆ ತಲಿಗಾಳ

ಮತ್ತೊಯ್ದ್ರ್ಯಾರೆ ತಲಿಗಾಳ ಅಂತೇಳಿ
ಪಟ್ಟುಣುದ ಜನರೇ ನುಡುದಾರೆ

ಆನವೇರಿ ಸಿದ್ದಯ್ಯೋ ಮುನ್ನೂರಾನೆ ಕುದ್ರೆ
ಮುನ್ನೂರು ಜನ ರಾವುತೂರು–ಆಗಿನ್ನು
ಆಳುಮಾಡಿ ಸಿದ್ದಯ್ಯ ಕಳುವ್ಯಾನೆ

ಕಳ್ಳಾನ ಹಿಡಿತನ್ನಿ ಕಳ್ಳಾನ ಹೊಡತನ್ನಿ
ಕಳ್ಳಾನ ನೀವು ಹಿಡತನ್ನಿ

ಮುನ್ನೂರಾನೆ ಕುದ್ರೆ ಮುನ್ನೂರು ಜನ ರಾವುತೂರು
ದಳವಾಯಿ ಹಿಂದೆ ಬರುತಾರೆ

ಕರಿಯಾನೆ ಕುದುರ್ಯೋರೆ ವಾರ್ಯಾಗಿ ಬರಿರೇಲ
ಈಡ್ಯಾಡೆನು ನಿಮ್ಮ ತಲಿಗಾಳ–ಈಡ್ಯಾಡದಿದ್ರೆ
ಪುಂಡಾ ಜಂಗಮರ ಮಗನಲ್ಲ

ಮರಿಯಾನೆ ಕುದುರ್‍ಯೋರೆ ವಾರ್‍ಯಾಗಿ ಬರಿರೇಲ
ತೂರ್‍ಯಾಡೆನು ನಿಮ್ಮ ತಲಿಗಾಳ–ಈಡ್ಯಾಡವಿದ್ರೆ
ಪುಂಡಾ ಜಂಗಮರ ಮಗನಲ್ಲ

ಪುಂಡಾನೆ ಜಂಗಮರ ಮಗನಲ್ಲ ಅಂದೇಳಿ
ಸಿಂಗಾರಿ ಬಿಲ್ಲ ಹೊಡುದಾನೆ–ದಳವಾಯಿ
ಮುಂದಾಕೋಡೋಡಿ ಬರುತಾನೆ

ಮುಂದಾಕೋಡೋಡಿ ಬರುತಾನೆ ದಳವಾಯಿ
ವಡುನಾಳು ಕಣಿವೀಗೆ ಬರುತಾನೆ–ತಿಮ್ಮಣ್ಣ
ಹನುಮಯ್ಯನ ಬಂದು ಮರಿಬಿದ್ದ

ಸಟ್ಟ ಸೆನಿವಾರೋ ನೆಟ್ಟನ ಮದ್ಧ್ಯನುದಾಗೆ
ಅಂಗೈಲರಿ ನಾಮ ಧರಿಸೊ–ಹನುಮಯ್ಯಾನ
ಹನುಮಯ್ಯನ ಬಂದೆ ಮರಿ ಬಿದ್ದ

ಬಂದಂತ ಬೆಸಮಗನ ಬೆನ್ನಿನಿಂದಿಟ್ಟುಕೊಂಡು
ಬಂದಾ ದಂಡುಗಳ ನೋಡುತಾನೆ–ಹನುಮಯ್ಯ
ಹೆಬ್ಬಾಲದ ಮರವ ಅವಕಿತ್ತ

ಹೆಬ್ಬಾಲದ ಮರವ ಅವಕಿತ್ತ ಹನುಮಯ್ಯ
ಬಡ್ಡಿ ಮೆಲ ಮಾಡಿ ಹಿಡಕಂಡ–ಹನುಮಯ್ಯ
ಬಂದಾ ದಂಡುಗಳಾ ಸವುರ್‍ಯಾನೆ

ಆನೆ ಕಾಲಾ ಮುರುದು ಕುದ್ರೆ ಕಾಲಾ ಮುರುದು
ಬಂದಾ ದಂಡುಗಳೀ ಹಿಂದಕ್ಕೆ–ವ್ವಾದಾರೆ
ಆನವೇರಿ ಸಿದ್ದಯ್ಯಗೆ ಹೇಳುತಾರೆ

ಎದಿಯಲ್ಲಿ ಬಹುದೀರ ಕಾಲಲ್ಲಿ ಬಹು ಬೇಗ
ಯಾವ ತಾಯಿ ಅವುನ ಜನಿಸಿದ್ದೊ–ಮೂಡಲಸೀಮೆ
ಗಾಡಿಕಾರ ನಮಿಗೆ ದಕಲಿಲ್ಲ

ಗಾಡಿಕಾರ ನಮಿಗೆ ದಕಲಿಲ್ಲ ಸಿದ್ದಯ್ಯ
ಒಬ್ಬರಿಗೂ ಅವುನು ಸಿಗಲಿಲ್ಲ

ನಮ್ಮೆಂಡಾರ ಮಕ್ಕಳಿಗೆ ಉಳಕಂಡು ಬಂದೀವಪ್ಪಾ
ನಿನ್ನ ಸಂಬಾಳಿಲ್ಲೀಗೆ ಬರತಾವು

ಬಂದಾ ದಂಡುಗಳೇ ಹೇಳ್ಯಾರೆ ಸಿದ್ದಯ್ಯಗೆ
ಹನುಮಯ್ಯ ಅಂದು ಕೇಳುತಾನೆ

ಬಂದಾ ದಂಡುಗಳ ಹಿಂದಕ್ಕೆ ಕಳುವೀದೆ
ನನಗೇನು ಕೊಡುತೀಯೊ ಬೆಸುವುಗನೆ

ಏನಕೊಟ್ಟರೆ ಇರುವ್ನೋದೆ ಹನುಮಯ್ಯ
ಬಟ್ಟಿಣ್ಣೆ ಚಿಟ್ಟಕ್ಕಿ–ವರುಸಾಕೊಂದುಸಾರಿ
ನಿನ ತೇರಾಗಾಲೀಗೆ ಕಳುಸೂವೆ

ನಿನ ತೇರಾಗಾಲೀಗೆ ಮೀಸಾಲು ಕಳುಸೂವೆ
ದಳವಾಯಿ ತಿಮ್ಮಣ್ಣ ನುಡುದಾನೆ

ಹತ್ತು ಬಿರುದಿಗಿನ್ನು ಹೆಚ್ಚೀನ ಬಿರುದೈತೆ
ಹೆಚ್ಚೀನೊಕ್ಕಾಲೆ ನನಗೈತೆ–ಬ್ಯಾಲನೂರ
ಅದರಗು ನಿನ್ನೆಸುರ ಕರಸೂವೆ

ಗಂಡು ಹುಟ್ಟಿದರನುಮು ಹೆಣ್ಣು ಹುಟ್ಟಿದರನುಮು
ಗಂಡೇಳ ಹೆಸುರಾ ಕರಸೂವೆ–ಹನುಮಯ್ಯ
ಹೆಣ್ಣೇಳ ಹೆಸುರಾ ಕರಸೂವೆ

ಮೊದಲುಟ್ಟಿದೆಸುರ ಕರಸೂವೆ ಹನುಮಯ್ಯ
ನಮ್ಮಪ್ಪನ ಬಳಿಗೆ ಕಳಿಕೊಡೋ

ವಡನಾಳ ಹನುಮಯ್ಯೋ ದಳವಾಯಿ ತಿಮ್ಮಣ್ಣಾನ
ಬಂದೂ ಅವನಾಗ ಕಳುವ್ಯಾನೆ

ಕರಿ ಎಲಿಯ ಕಾಮು ಬಾರೋ ದಳವಾಯಿ
ಎಳಿಯ ಹೊಂಬಾಳೆ ಬಾರೊ

ದಳವಾಯಿ ತಿಮ್ಮಣ್ಣೋ ತಲಿಗಳ ತಕ್ಕಂಡು
ತಲಬಾಗುಲೊಳಗೆ ಅವರವ್ವ–ಕಾಮಾಲಿ
ತಣಿಗೆದಾರುತಿಯ ಬೆಳಗ್ಯಾಳೆ

ಆರುತಿ ಹಿಡುಕೊಂಡು ಅಂಗಯ್ಯಿ ನೊಂದಾವು
ಮುಂಗೈಯ್ಯಲವುಳು ಜಳಿರ್‍ಯಾವೆ–ಕಾಮವ್ವ
ಕಂದಗಾರುತಿಯ ಬೆಳಿಗ್ಯಾಳೆ

ಕಂದಗಾರುತಿಯ ಬೆಳಿಗ್ಯಾಳೆ ಕಾಮವ್ವ
ಕಂದನೊಳವೀಗೆ ಕರುದೊಯ್ದೊ

ದಳವಾಯಿ ತಿಮ್ಮಣ್ಣೋ ತಲಿಗಾಳ ತಂದಾನೆ
ಅವರಪ್ಪನ ಮಂಚಾಕೆ ಇಡುತಾನೆ

ತಂದಂತ ತಲಿಗಾಳ ತಂದೇಯ ಮುಂದಾಕೆ
ತಂದೆ ಮುಂದಾಕೆ ಇಡುತಾನೆ

ತಂದಂತ ತಲಿಗಾಳ ತಂದೆ ಹಿರಿಯಯ್ಯ್ ನೋಡಿ
ಚಪ್ಪಾಳೆ ಹೊಡೆದು ತಲೆದೂಗಿ

ತಂದೆ ಹಿರಿಯಯ್ಯೋ ಚಪ್ಪಾಳೆ ಹೊಯ್ದು
ಏನಂದೆ ಆಗ ನುಡುದಾನೆ

ನೋಡಿಕ್ಯಂಡು ಬಾರಂದ್ರೆ ಮಾಡಿಕ್ಯಂಡು ಬಂದೆಲ್ಲೊ
ಕೆಣಿಕ್ ಬಂದೆ ಗಡಿಯ ಜಗಳಾವ–ಅಂದೇಳಿ
ತಂದೆ ಹಿರಿಯಯ್ಯ ನುಡುದಾನೆ

ನಮ್ಮಪ್ಪೂನ ತಲೆಯೊ ನಾನೀಗ ತಂದಿನಪ್ಪ
ಮುನ್ನೂರಾನೆ ಕುದ್ರೆ ಮುನ್ನೂರು ಜನ ರಾವುತೂರು
ಆನವೇರಿ ಸಿದ್ದಯ್ಯ ಬಿಡಬಹುದೇ

ಸಿಗ್ಗುದುಲೆ ನಾನೀಗ ಬಂದಿನಪ್ಪ ನಾನೀಗ
ವಡುನಾಳನುಮಯ್ನ ಮರಿಬಿದ್ದು

ಅವುನೀಗೆ ನಾನೀಗ ಮೀಸಾಲ ಕಳಸೂವೆ
ಹನುಮಯ್ಯಗೆ ಮೀಸಾಲ ಕೊಡಬೇಕೆ

ವಕ್ಕಾಲ ವಳಗೆ ಮಗನುಟ್ಟಿದೆಸುರ
ಮಗಳುಟ್ಟಿದೆಸುರ ಕರಸಪ್ಪೊ

ಉಂಡುಟ್ಟು ಅವರೀಗ ಮನಿಗ್ಯಾರೆ ಅವರೀಗ
ಮಡುದಿ ಕಾಮಾಲೆ ಏನಂದೆ–ನುಡುದಾಳೊ
ಏನಂದು ಆಗ ಹೇಳುತಾಳೆ

ಅರಸಾ ನಿನ್ನಾ ಕುದುರೆ ಅರಸುಣುವ ಮೇದಾವೆ ತಾನಂದನ್ನಾನ
ಅರಿವಿಲ್ಲವೇನು ಹಿರಿಯಯ್ಯ–ನಿನ್ನ ಕುದುರೆ
ವಾದಾವ್ವಾನ್ವೇರಿ ಜಗಳಾಕೆ

ಹಿರಿಯಯ್ಯನಕ್ಕುದುರೆ ಕಡುಲೇಯ ಮೇದಾವು
ಕಾಳುಕ್ಕೆ ಕಾಲ ಕೆದುರ್‍ಯಾವು–ನಿನಕ್ಕುದುರೆ
ದುಮುಕ್ಯಾವಾನ್ವೇರಿ ಜಗಳಾಕೆ

ಕಣಿಕಣಿ ರಟ್ಟ್ಯೋರೆ ಕುಮುಕುಮುದ ಮೀಸ್ಯೋರೆ
ಹುಬ್ಬಾ ಬಾಚೋರೆ ಹಿರಿಯಯ್ಯ–ನಿನಕ್ಕುದುರೆ
ಹೋದಾವಾನ್ವೇರಿ ಜಗಳಾಕೆ

ಇದುದಿದ್ದಂಗೆ ಎದ್ದಾನೆ ಹಿರಿಯಯ್ಯ
ಇಬ್ಬಾಣೆ ಹುಲ್ಲ ತುಳಕೊಂಡು–ಹೊನ್ನೇಬಾಗೆ
ದಿಬ್ಬುಕೋಗಿ ಡಿರ್‍ಯೇವ ಮಡಿಸ್ಯಾನೆ

ದಿಬ್ಬುಕು ಡಿರ್‍ಯೇವ ಮಡಿಸ್ಯಾನೆ ಬೀರೇಶ
ನ್ಯಾಯುಕು ಸಿದ್ದಯ್ಯನ ಕರಿಸ್ಯಾನೆ

ದುಮ್ಮಿ ಸಿದ್ದಯ್ಯೋ ಆನವೇರಿ ಸಿದ್ದಯ್ಯ
ಮೊಟುಬಳು ಚಿಕ್ಕಣ್ಣ ಬರಬೇಕು

ಗೋಷಿಕ್ಯರೆ ಸಿದ್ದಯ್ಯೋ ಬನಿಹಟ್ಟಿ ಸಿದ್ದಯ್ಯ
ಪಾಡೀಗಟ್ಟೈಯ್ಯ ಬರಬೇಕು–ಆಗಿನ್ನು
ನಾಕೂರ ಜನುರೇ ಒರುತಾರೆ

ಹೊನ್ನೇಬಾಗಿ ದಿಬ್ಬಾಕೆ ಬಂದಾರೆ ಅವರೀಗ
ಆಗ ಪಂಚಾಯ್ತಿ ಏನಂದು–ಮಾಡುತಾರೆ
ಏನಂದಿರಿಯಯ್ಯನ ಕೇಳುತಾರೆ

ಸಾವಾರದೊಕ್ಕಾಲು ಸರದಾರ ಹಿರಿಯಯ್ಯ
ಸಾವಾರದೊಕ್ಕಾಲು ಸಮರಂತ-ಹಿರಿಯಯ್ಯ
ಒಂದೊಕ್ಕಲಿಗ್ಯಾಕೋ ವಡುದಾಟ

ಹತ್ತೊಕ್ಕಲೊಳಗೆ ಒಂದೊಕ್ಕಲ್ವಾದಾರೆ
ಗುದ್ದ್ಯಾಟವ್ಯಾಕೊ ಹಿರಿಯಯ್ಯ-ಅಂತೇಳಿ
ಒಂದೂರು ಜನುರೇ ನುಡಿದಾರೆ

ನನ ಹಿಂಡೀನಾಗೆ ಕೂರಿ ಹಿಂಡದೆಪ್ಪಿವ್ವಾದಾರೆ
ಹುಡುಕ್ಕೊಯ್ಯೇ ಬಾರದೇನೋ ಎಲಸಿದ್ದ

ನನ ಕಳ್ಳ್ಯಾಳ ಕೂರಿ ಕಳವೆಪ್ಪಿ ವ್ವಾದಾರೆ
ನೋಡಿಕ್ಯೋ ಬಾರದೇನೊ ಎಲಸಿದ್ದ-ಅಂತೇಳಿ
ಸ್ವಾಮಿ ಹಿರಿಯಯ್ಯೋ ನುಡುದಾನೆ

ಊಟಾಕೆ ಇಟ್ಟಿದ್ದೆ ಕೋಟೇಳುಸಾವುರ ಕೊಟ್ಟಿದ್ದೆ
ನನ್ನ ಕ್ವಾಟೆ ಬಲದಂಡೆ ಸಲವಿದಂತ-ವಕ್ಕಲಿಗೆ
ವಡದಾಟವ್ಯಾಕೋ ಪರಚಂಡ

ಉಂಬಾಕೆ ಇಟ್ಟಿದ್ದೆ ಗೊಂಬೇಳ್‌ಸಾವುರ ಕೊಟ್ಟಿದ್ದೆ
ಮಂದಿ ಬಲದಂಡೆ ಸಲವಿದಂತ-ವಕ್ಕಲಿಗೆ
ವಡುದಾಟವ್ಯಾಕೋ ಹಿರಿಯಯ್ಯ

ಆಚೆಕಾನಾವೇರಿ ಈಚೆಕೆ ಮಂಜಿನಗುಡ್ಡೆ
ಗಂಜೀ ಕೂಳೀಗೆ ಮನಸ್ವಾತಂತ-ವಕ್ಕಲಿಗೆ
ಒಂಡಾಟವ್ಯಾಕೋ ಹಿರಿಯಯ್ಯೋ

ಆಚೆಕಾನಾವೇರಿ ಈಚೆಕೆ ಮಂಜಿನಗುಡ್ಡೆ
ಬಿಳಿಯ ಕೂಳೀಗೆ ಮನಸ್ವಾತಂತ-ವಕ್ಕಲಿಗೆ
ವಡದಾಟವ್ಯಾಕೋ ಪರಚಂಡ

ವಡದಾಟವ್ಯಾಕೋ ಪರಚಂಡ ಅಂತೇಳಿ
ಮುಮ್ಮಿ ಸಿದ್ದಯ್ಯೋ ನುಡುದಾನೆ

ಆನೆಯ ವ್ಯಾಲ ಬಂದಾರೆ ಲಾಬುಕೆ ಬಂದಾರಂದು
ಕೋಡಗಲ್ಲಾಗೆ ನಾವ್ ಬಂದ್ಯೋ–ತಾಳೀಕಟ್ಟಿ
ಬೀರೇಶನೋರಾಟ ಬಿಡುವಲ್ಲೋ

ಕುದುರಿ ವ್ಯಾಲೆ ಬಂದಾರೆ ಲಂಚಕು ಬಂದಾರಂದು
ತರಿಯ ಕಲ್ಲಾಗೆ ನಾವ್ ಬಂದ್ಯೋ–ತಾಳೀಕಟ್ಟಿ
ಹಿರಿಯಯ್ಯ ಹೋರ್ಯಾಟ ಬಿಡುವೊಲ್ಲ

ಯಾವಾಗ ನೋಡಿದುರೆ ಕೊಂದಾಟ ಕಡುದಾಟ
ಅಂದೋನೆ ಅಲ್ಲೋ ಹಿರಿಯಯ್ಯೋ–ಅಂದೇಳಿ
ದುಮ್ಮಿ ಸಿದ್ದಯ್ಯೋ ನುಡುದಾನೆ

ಬುದ್ದಿವಂತಾರಂದು ಇದ್ದಲ್ಲಿ ಕರಸೀದೆ
ಕದ್ದು ಪಂಚಾಯ್ತು ನುಡುದೆಲ್ಲೋ–ದುಮ್ಮಿಸಿದ್ದ
ಇದ್ದ ಡಿರ್ಯೆವ ಬಿಟ್ಟೋ ನಡಿ ಅಂದ

ಇದ್ದ ಡಿರ್ಯೆವ ಬಿಟ್ಟು ಎದ್ದು ಹೋಗಾದಿದ್ರೆ
ರಟ್ಟೀಯಾ ಹಿಡುದು ಎಳಸೂವೆ–ದುಮ್ಮಿಸಿದ್ದ
ಎದ್ದು ಬಂದು ಮುರು ಗುದ್ದ ಬಿಡುತೀನಿ

ರಟ್ಟೀಯ ಹಿಡುದು ಎಳಿಸ್ಯಾನೆ ಹಿರಿಯಯ್ಯ
ಎದುಬಂದು ಮುರು ಗುದ್ದ ಬಿಡುತಾನೆ

ಬಣ್ಣಾದ ಅಂಗೀಗೆ ಚನ್ನಾಂಗದ ಕಶೆ ಹೊಯ್ದು
ಕನ್ನ ಕತ್ತಿಗುಳ ತಗುದಾ–ಮೊಟುಬಳ್ಳು ಚಿಕ್ಕಣ್ಣ
ಮೊಸದಿಂದ ಕೊಂದ ಬಲಗೆಪ್ಪ

ಮೊಸದಿಂದ ಕೊಂದ ಬಲಗೆಪ್ಪ ಹಿರಿಯಯ್ಯ
ಗಯವಾದನಂತೆ ರಣದಾಗೆ

ಚನ್ನಾದ ಅಂಗೀಗೆ ಬಣ್ಣಾದ ಕಶೆ ಹೊಯ್ದು
ಸಣ್ಣ ಕತ್ತಿಗುಳೋ ತಗುದಾನೆ–ಮೊಟುಬಳ್ಳು ಚಿಕ್ಕಣ್ಣ
ಮೊಸದಿಂದ ಕೊಂದೋ ಪರಗೆಪ್ಪ

ಗಯುವಾದನಂತೆ ರಣುದಾಗೆ ಹಿರಿಯುಯ್ಯ
ಮತುನಾದನಂತೆ ರಣುದಾಗೆ–ಬೀರೇಶ
ಹೊನ್ನೆಬಾಗಿ ದಿಬುದಾಗೆ ಮನಿಗ್ಯಾನೆ

ಬಾಳೇಯ ವನುದಾಗೆ ಬಾಳೇಯ ಗಿಡುದಾಗೆ
ಬಾಲರಾಜಣುದ ಬಯುಲಾಗೆ–ಹಿರಿಯುಯ್ಯ
ಹೀಡ್ಯಾಡ್ಯನವರ ತಲಿಗಾಳ

ನಿಂಬೇಯು ವನುದಾಗೆ ನಿಂಬೇಯು ಗಿಡುದಾಗೆ
ಹಿಂಗರಾಜಣುದ ಬಯುಲಾಗೆ–ಹಿರಿಯುಯ್ಯ
ಹೀಡ್ಯಾಡುತಾನವ್ರ ತಲಿಗಾಳ

ಹೀಡ್ಯಾಡುತಾನವ್ರ ತಲಿಗಾಳ ಹಿರಿಯುಯ್ಯ
ಮತುನಾದನಂತೆ ರಣುದಾಗೆ

ಮಡುದಿ ಕಾಮಾಲೆ ಮಗನು ದಳವಾಯಿ ತಿಮ್ಮಣ್ಣ
ಅವರಿಬ್ಬರೂ ಗೋಳ್ಯಾಡಿ ಬರುತಾರೆ

ಎಲ್ಲಿಗೋಗಿದ್ದ್ಯೋ ದಳ್ವಾಳಿ ಹಿರಿಯುಯ್ಯ
ವಲ್ಲ್ಯಾಲ್ಲಾ ರಾಣ ರೈತಾವೆ–ಹೊನ್ನೇಬಾಗಿ
ದಿಬುದಾಗಿರಿಯುಯ್ಯ ಮಲಗ್ಯಾನೆ

ಪುಂಡಗಾರ ಹಿರಿಯುಯ್ಯೋ ಉಂಡಾರೆ ಹೋಗಲಿಲ್ಲ
ಗಂದಾದಿಳ್ಳೀವ ಹಿಡುದಿಲ್ಲ–ಅಂತೇಳಿ
ಮಡುದಿ ಕಾಮಾಲೆ ನುಡುದಾಳೆ

ಮಡುದಿ ಕಾಮಾಲೆ ನುಡುದಾಳೆ ಹಿರಿಯುಯ್ಯ
ಮಗನು ದಳವಾಯಿ ಕರುದಾನೆ

ಕೆಪ್ಪೆವ್ಯಾಗಳ ಗಾಯೋ ಒಪ್ಪಪ್ಪಗೆ ಬಿಗಿ ಮಗುನೆ
ಕತ್ತೀಯು ತಾರೋ ನನಕೈಲಿ–ನನ ಮಗುನೆ
ಗಾಡಾನೊಂದ್ವಾಲೆ ಬರಿ ಮಗುನೆ

ಕೆನ್ನೆವ್ಯಾಗುಳ ಗಾಯೋ ಅಣ್ಣಣ್ಣೆ ಬಿಗಿಮಗುನೆ
ಕಾಳ್ಡೀವ ತಾರೊ ನನಕೈಲಿ–ನನ ಮಗುನೆ
ತಪ್ಪಾನೊಂದ್ವಾಲೆ ಬರಿ ಮಗುನೆ

ಅರಿವೇಳಿಕೊಡಪ್ಪೋ ಕುರುವೇಳಿಕೊಡಪ್ಪ
ಅರಿವಿಲ್ಲದ್ವಾಲೆ ಬರಿಲ್ಯಾಂಗೋ

ಗೊತ್ತೇಳಿ ಕೊಡಪ್ಪೋ ಮತ್ತೇಳಿ ಕೊಡಪ್ಪೋ
ಗೊತ್ತಿಲ್ಲದ್ವಾಲೆ ಬರಿಲ್ಯಾಂಗೋ

ಬಡಗಲಿಂದ ಬಂದಿವಪ್ಪೋ ಏಳುಜನ ತಮ್ಮಗಳು
ತುಪ್ಪದಳ್ಳಿ ವಳಗೆ ಉಳಿಪೈಣ–ಮಲ್ಡಿೀದ್ವಾರೆ
ಕಣಿವೆ ವ್ಯಾಲಾಕೆ ನೆಡದೋದ

ಕಣಿವೆ ವ್ಯಾಲಾಕೆ ನೆಡದೋದ ಶಿವನೇಯ
ಹೊನ್ನುಪ್ಪರಿಗವ್ರ ಅರಮನೆ–ಶಿವನೇಯ
ಮಲ್ಡೆಪ್ಪನೆಸುರ ಮೊದಲಿಡೊ

ಮಲ್ಡೆಪ್ಪನೆಸುರ ಮೊದಲಿಡೊ ತಿಮ್ಮಣ್ಣ
ನಿಂಗಣ್ಣನೆಸುರ ಕಡಿಗಿಡೊ–ಮುಗಳೀಯ
ತಿಮ್ಮಣ್ಣನೆಸುರ ಕೊನಿಗಿಡೊ

ತಿಮ್ಮಣ್ಣನೆಸುರ ಕೊನಿಗಿಡೊ ನನಕಂದ
ಮಂತುರಿಗೆ ವಾಲಿ ಬರಿ ಮಗುನೆ

ಆಲೂರು ಬೇಲೂರು ಮೇಲಾದ ದಂಡೂರು
ಅದ್ರ ವಾರಿಗೈತಪ್ಪೋ ಎಳಿಯಾಲದಯ್ಯಾನ
ವಾಗುರಿಗೆ ಮಾಟ ಬರಿಮಗುನೆ

ಹತ್ತೂರು ಮತ್ತೂರು ಹೆಚ್ಚೀನ ದಂಡೂರು
ಆದರೊತ್ತಿಗೈತಪ್ಪೋ ಎಳಿಯಾಲದಯ್ಯಾನ
ಉಪ್ಪರಿಗೆ ಮಾಟ ಬರಿ ಮಗುನೆ

ಉತ್ತೂರ ಬರಿಯೋರಿಗೆ ಹಚ್ಚ್ಯಾರೆ ಶಿವದಾರ
ಮತ್ತೆ ಸಾಂಬ್ರಾಣಿ ಉಡುದಾರ

ವಾಲೆ ಬರಿಯೋರಿಗೆ ಹಾಕ್ಯಾರೆ ಶಿವದಾರ
ವ್ಯಾಲೆ ಸಾಂಬ್ರಾಣಿ ಉಡುದಾರ–ಶಿವನೇಯ
ವಾಲೆಯ ಬರಿಯೋ ಬೆಸಮಗ್ಗೆ

ಹಿಂದಲ ಪಾದದ ವ್ಯಾಲೆ ಮುಂದಲ ಪಾದಾನೂರಿ
ಮುಂಬಾಗಿ ವಾಲೆ ಬರಿಮಗುನೆ–ತಿಮ್ಮಣ್ಣ
ಉಂಗುರದ ಬೆಳಕೆ ಪ್ರಜಿಗೆಲ್ಲಾ

ಉತ್ತಾರ ಒಯ್ಯಾನಿಗೆ ತುಪ್ಪ ಬಾನಾನಿಟ್ಟು
ಮತ್ತೊಂದಿಳ್ಳೇವು ಮೆಲಕೊಡೆ

ವಾಲೆಯ ಒಯ್ಯನಿಗೆ ಹಾಲು ಬಾನಾನಿಟ್ಟು
ಮೇಲೊಂದಿಳ್ಳೇವು ಮೆಲಕೊಡೆ–ಶಿವನೇಯ
ವಾಲೇಯ ಒಯ್ಯೋ ಬೆಸಮುಗ್ಗೆ

ಆಗ ಈಗಂಬುತೊ ಹೋಗುತ ಮಾತಡಬ್ಯಾಡ
ಜೂಜೀಗೊಂದೆಲೆಯಾ ಮೆಲಬ್ಯಾಡ–ಶಿವನೇಯ
ಮಾರಾಯುಗೀ ವಾಲೆ ತಲುಪ್ಸಪ್ಪೋ

ಅಂತ ಇಂತಂಬುತೊ ನಿಂತು ಮಾತಡಬ್ಯಾಡ
ಚಿಂಚಿಗೊಂದೆಲೆಯಾ ಮಲಬ್ಯಾಡ–ನನ ಮಗುನೆ
ಮಾರಾಯುಗೀ ವಾಲೆ ತಲುಪ್ಸಪ್ಪೋ

ಹತ್ತು ಮಾರುದ್ದೋ ಹೊತ್ತೀಗೆ ತಕ್ಕೊಂಡು
ರಾಯರ ಕಣಿವೀಗೆ ದಣುದಾನೆ

ಆರು ಮಾರುದ್ದೋ ಹೊತ್ತೀಗೆ ತಕ್ಕೊಂಡು
ರಾಯರ ಕಣಿವೀಗೆ ದಣುದಾನೆ

ಜೋಡ ಸಿಂಗೇನಳ್ಳಿ ಒತ್ತೀಲಿ ತುಪ್ಪಾದಳ್ಳಿ
ರಾಯರ ಪಾದಕ್ಕೆ ದಣುದಾನೆ

ಒತ್ತೀಲಿ ತುಪ್ಪಾದಳ್ಳಿ ಒತ್ತೀಲಿ ಸಿಂಗೇನಳ್ಳಿ
ರಾಯರ ಪಾದಾಕೆ ದಣುದಾನೆ

ತರಿಗಲ್ಲು ಹಿಟ್ಟಾದು ಕಗ್ಗಲ್ಲೇ ಪುಡಿಯಾದು
ತರಿಯಾಲದ ಮರವೇ ಬಯಲಾದು–ತಿಮ್ಮಣ್ಣ
ವಾಲೇಯ ಒಯ್ಯೋ ರಭಸಾಕೆ

ವಾಲೇಯ ಒಯ್ಯೋ ರಭಸಾಕೆ ದಳವಾಯಿ
ವಾಲೇಯನಾಗ ತರುತಾನೆ

ಹತ್ತು ಮಾರುದ್ದ ಹೊತ್ತಿಗೆ ತಕ್ಕೊಂಡು
ಕಟ್ಟೇಯ ಮ್ಯಾಲೆ ದೊರಿಬಂದ–ತಿಮ್ಮಣ್ಣ
ಅವನಿಟ್ಟ ನಾಮುಗಳೇ ಚೆವುತಾವೆ

ಆರು ನೂರುದ್ದೋ ವಾಲೇಯ ತಕ್ಕೊಂಡು
ಕೆರಿ ಏರಿಮ್ಯಾಲೆ ದೊರಿಬಂದ–ತಿಮ್ಮಣ್ಣ
ನೀಲಿ ನಾಮುಗಳೇ ಚೆವುತಾವೆ

ಉಂಬಾಕೆ ಬುತ್ತಿಲ್ಲೋ ಉಳಿಯಾಕೆ ಹೊತ್ತಿಲ್ಲೊ
ನಡಿಯಾಕೆ ದಾರಿ ಸವುನಿಲ್ಲೋ–ಶಿವನೇಯ
ಮಾರಾಯಗೀ ವಾಲೆ ತಲುಪ್‌ಲಿಲ್ಲ

ಪುರಾಯಗೀ ವಾಲೆ ತಲುಪ್‌ಲಿಲ್ಲ ಅಂತೇಳಿ
ಹೆಬ್ಬಾಗುಲಿಗಾಗ ಬರುತಾನೆ–ತಿಮ್ಮಣ್ಣ
ಬಾಗುಲ ಗೊಲ್ಲಾರೆ ತಡುದಾರೆ

ಸ್ವಾಮಿ ಮುಳುಗ್ಯಾವು ದೊಳ್ ಚಂಜೆ ಆದಾವು
ಹೆಬ್ಬಾಗುಲವುರೆ ಹಾಕುತಾರೆ–ತಿಮ್ಮಣ್ಣ
ಬಾಗುಲ ಗೊಲ್ಲಾರೆ ತಡುದಾರೆ

ಅತ್ತೆಮನೆ ಸ್ವಾಸೆ ಹೊತುದೆಪಿ ನೀರಿಗೆ ಬಂದೊ
ವಂಡದ ನೀರೀಗೆ ಬರುತಾಳೆ

ರಾಯ ಶಿವನೇಯ ನಾರೇರ ಕೊಡದ ಮ್ಯಾಲೆ
ಪುನಗಿನ ಬೆಕ್ಕಾಗಿ ಒಳಹೊಕ್ಕ

ಚಿಕ್ಕ ಶಿವನೇಯ ನಿಸ್ತ್ರೇಯ ಕೊಡದ ಮ್ಯಾಲೆ
ಪುನಗಿನ ಬೆಕ್ಕಾಗಿ ಒಳಹೊಕ್ಕ–ನಿಂಗಣ್ಣ
ಅಣ್ಣ ನಿಂಗಣ್ಣನೊ ಹುಡುಕ್ಯಾನೆ

ಹತ್ತು ಮಾರುದ್ದೋ ಹೊತ್ತಿಗ್ಗೆ ತಕ್ಕೊಂಡು
ಪಟ್ಟಾಣನೆಲ್ಲೋ ಹುಡುಕ್ಯಾನೆ–ಶಿವನೇಯ
ಅಣ್ಣ ನಿಂಗಣ್ಣನೋ ಸುಳವಿಲ್ಲ

ಆರು ಮಾರುದ್ದೋ ಗ್ಯಾನಾವ ಹಿಡಕಂಡು
ಕೇರಿ ಕೇರಿಗುಂಟೇ ಬರುತಾನೆ–ದಳವಾಯಿ
ಬಾಲಾ ನಿಂಗಣ್ಣನ ಸುಳಿವಿಲ್ಲೋ

ಹಟ್ಟೇಯ ಕಸವೋ ಅತ್ತ ಗುಡುಸೂವಮ್ಮ
ಯತುಲೇ ನಿಂಗಣ್ಣನೋ ಅರಮನೆ–ತೋರಿದೋರಿಗೆ
ವಾಲಿಗೊಜ್ಜುರವೋ ಇಡಸೂವೆ

ಅಂಗಳ ಕಸವೋ ಅಂಗೇ ಗುಡುಸೋ ತಾಯಿ
ಯಂಗೇ ನಿಂಗಣ್ಣನೋ ಅರಮನೆ–ತೋರಿದೋರಿಗೆ
ಬಂದಿಗು ಬಂಗಾರ ಇಡಸೂವೆ

ಅಂದವೊಳ್ಳೆ ತೋಳೀಗೆ ಚಂದವೊಳ್ಳೆ ಪುಟ್ಟಣಿಕಣ
ವಾಲೆ ಮುಂದಾಕೆ ಗಜಮಲಕು–ಇಟಗಂಡು ಪಿಟ್ಟರಸಿ
ಗಂಡಾನ್ನಾವಲ್ಯಾವುಕೆ ನಡುದಾಳೆ

ಬಾಗೂತ ಬಳುಕುತ ಜಾಗೂತ ಜಳುಕುತ
ಅಕೆ ಜರತಾರ ನೆಲಕೆ ಎಳಲೂತ–ಪಿಟ್ಟರಸಿ
ಗಂಡಾನ್ನಾವಲ್ಯಾವ್‌ಕೆ ಬರುತಾಳೆ

ಗಂಡಾನ್ನಾವಲ್ಯಾವ್‌ಕೆ ಬರುತಾಳೆ ಪಿಟ್ಟವ್ವ
ಬಟ್ಟೇಲಿ ಆಗ ತೋರ್ಯಾರೆ

ಪಿಟ್ಟರಸಿ ಹಿಂಬಾಲು ಹಿಡಕಂಡು ತಿಮ್ಮಣ್ಣ
ಅಣ್ಣಾ ನರಮನಿಗೆ ಬರುತಾನೆ

ಅಣ್ಣಾ ನರಮನಿಯ ಬಾಗಲಾಗೆ ನಿತುಕೊಂಡು
ದಳವಾಯಿ ತಿಮ್ಮಣ್ಣ ನೆಲಿಗೊಂಡು

ಎಲ್ಲಿಂದ ಬಂದೆಪ್ಪೋ ಬಲ್ಲಿದರ ಬೆಸಮಗುವೆ
ನೆಲ್ಲು ಹೊಯ್ದಂಗೆ ಮಕ ಬೆವುತು

ಯತಲಿಂದ ಬಂದೆಪ್ಪೋ ಮುತಿನಂತ ಬೆಸಮಗುವೆ
ಮುತ್ತ ಹೊಯ್ದಂಗೆ ಮಕಬೆವುತು–ಬೆಸಮಗುನೆ
ಯಾವ ನಾಡಿನ್ ದೊರೆ ಮಗುನೋ

ಎಲ್ಲೇನು ನಾನಲ್ಲೋ ಎತುಲೋನು ನಾನಲ್ಲೋ
ಯೇಳೂರಿಗೆಲ್ಲಾ ಯಜಮಾನ–ತಾಳೀಕಟ್ಟಿ
ಹಿರಿಯಯ್ಯನ ಮಾನೆ ಬೆಸವಾಗ

ಯತುಲೋನು ನಾನಲ್ಲೊ ಎಂತೋನು ನಾನಲ್ಲೋ
ಏಳೂರಿಗೆಲ್ಲಾ ಅದಿಪೋತಿ–ತಾಳೀಕಟ್ಟಿ
ಬೀರೇಶನ ಮನಿಯ ಬೆಸವಾಗ

ಬೀರೇಶನ ಮನಿಯ ಬೆಸಮಗ ಅಂತೇಳಿ
ವಾಲೆ ಮಂಚಾಕೆ ವಗುದಾನೆ

ಮಗುದಂತ ವಾಲೆಯೋ ತಕ್ಕೊಂಡು ನಿಂಗಣ
ವಾಲೇಯ ವಡುದೇ ಓದುತಾನೆ–ಆನಾವೇರಿ
ಕಾಳುಗದ ಕತಿಯ ಬರುದೈತಿ

ಕಾಳುಗದ ಕತಿಯ ಬರುದೈತಾನಾವೇರಿ
ಕನ್ನಪ್ಪನ ಕತಿಯು ಬರುದೈತಿ

ಅಪ್ಪನ ಮಗ ಬಂದಾ ಅಂದು ಹತ್ತಿದ ಮಂಚ ಇಳುದು
ತಮ್ಮನ ತಬ್ಬಾಕಿ ಅವುಚಾನೆ–ನಿಂಗಣ್ಣ
ಅವನೇರಿದು ಮಂಚಾಕೆ ಕರೆದೊಯ್ತು

ಸಣ್ಣಕ್ಕಿ ಪಡಿಗೊಡಿರೆ ಭದ್ರೇರ್ ಇಳ್ಳೀವ್ ಕೊಡಿರೆ
ತಪ್ಪಾನೊಂದಡಿಗೆ ದುಡಮೀರೆ

ದೊಡ್ಡಕ್ಕಿ ಪಡಿಗೊಡಿರೆ ಕನ್ನೇರ್ ಇಳ್ಳೀವ್ ಕೊಡಿರೆ
ಗಾಡಾನೊಂದಡಿಗೆ ದುಡಮೀರೆ

ಬಂದ ತಮ್ಮಾಗೆ ಶರಣು ಸಂಪತ್ತಾಗಿ
ಯಡಿಯಾ ಬಿಡಾರ ಮಾಡಿಸ್ಯಾನೆ–ನಿಂಗಣ್ಣ
ತಮ್ಮನ ಕಳುವಾಕೆ ಹೊರಟಾನೆ

ತಮ್ಮನ ಕಳುವಾಕೆ ಹೊರಟಾನು ನಿಂಗಣ್ಣ
ಶಿವನೇ ಕಾವುಲಾಗೆ ಬರುತಾರೆ

ತಮ್ಮೊನ ಕಳುವಾಕೆ ಎಲ್ಲೀಗೆ ಹೊರಟಾನೆ
ಕ್ಯಾತೂರ್ ನಿಂಗಣ್ಣನ ಗುಡಿಮುಟ್ಟ

ಇಂದೇ ಬರುತೀನಿ ಕಣೊ ಬಂಟೆ ನಿನ್ನ ಕ್ವಾಮಾರ
ಗಂಜೀಹಚ್ಚಡದ ಘನ ಭೋಗಿ–ದೊಡ್ಡಪ್ಪ
ನಾನತ್ತೇ ತಾಸೀಗೆ ಬರತೀನಿ

ವಾಗೀ ಬರುತೀನಿ ಕಣೋ ಬಂಟೆ ನಿನ್ನ ಕ್ವಾಮಾರ
ಸಾಲಿ ಹಚ್ಚಡದ ಘನಭೋಗಿ–ದೊಡ್ಡಪ್ಪ
ನಾನಾರೆ ತಾಸೀಗೆ ಬರುತೀನಿ

ನಾನಾರೆ ತಾಸೀಗೆ ಬರುತೀನಿ ದೊಡ್ಡಪ್ಪ
ಏರಿದ ಮಂಚ ಇಳಿಬ್ಯಾಡೊ

ಮತ್ತೆ ಬರುತೀನಿ ಕಣೋ ಬಂಟೆ ನಿನ್ನ ಕ್ವಾಮಾರ
ಏಳೂರು ಬಲಗೊಂಡೆ ಬರತೀನಿ–ನಮ್ಮಪ್ಪ
ಏರೀದ ಮಂಚ ಇಳಿಬ್ಯಾಡೋ

ಮಂದೀನ ಬಲಗೊಂಡೆ ಬರುತೀನಿ ದೊಡ್ಡಪ್ಪ
ಹತ್ತಿರೊ ಮಂಚ ಇಳಿಬ್ಯಾಡೋ

ಹಿಂದೆ ಬರುವ ವಾಲೆ ಮುಂದಾಗಿ ಬಂದಿದ್ರೆ
ಮಂದಿ ಬಲಗೊಂಡೆ ಬರತಿದ್ದೆ –ದೊಡ್ಡಪ್ಪ
ಗಯವಾದ ಮ್ಯಾಲೆ ಕಳಬಹುದೆ

ಆಗ ಬರುವ ವಾಲೆ ಈಗಾನೆ ಬಂದಿದ್ರೆ
ಏಳೂರ ಬಲಗೊಂಡೆ ಬರತಿದ್ದೆ –ನಮ್ಮಪ್ಪ
ನೊಂದುಕೊಂಡ ಮ್ಯಾಲೆ ಕಳಬಹುದೆ

ನೊಂದುಕೊಂಡ ಮ್ಯಾಲೆ ಕಳಬಹುದೆ ಅಂತೇಳಿ
ಶಿವನೇ ನಿಂಗಣ್ಣೋ ನುಡುದಾನೆ

ತಮ್ಮ ನಿಂಗಣ್ಣನೋ ಕಳುವ್ಯಾನೆ ನಿಂಗಣ್ಣ
ತಳಮನಿಗೆ ಆಗ ಬರುತಾನೆ

ಕಣಿವೆ ಕೆಳಗ್ಲಿಂದೋ ಗಾರೆ ಚಾವುಡಿಂದೊ
ಈಡ್ಯಾಡುತ ಬಂದೋ ಹೊಸವಾಲೆ–ಮಕ್ಕಳಿರಾ
ವಾಲುಗದ ಕೈಯ್ಯೋ ನಿಲುಸ್ರಪ್ಪೊ

ತಾಳಿಕಟ್ಟೆಂದೋ ಮುತ್ತಿನ ಚಾವೂಡಿಂದೊ
ಇಟ್ಟ್ಯಾಡುತ ಬಂದೋ ಹೊಸವಾಲೆ–ಮಕ್ಕಳಿರಾ
ದೊಳ್ಳಿನ ಕೈಯೋ ನಿಲುಸ್ರಪ್ಪೊ

ನಮ್ಮಪ್ಪನ ಮಠದಿಂದೊ ಮುತ್ತಿನ ಚಾವೂಡಿಂದೊ
ತೂರ್ಯಾಡುತ ಬಂದೋ ಹೊಸವಾಲೆ–ಮಕ್ಕಳಿರಾ
ಕರಡೇಯು ಕೈಯೋ ನಿಲುಸ್ರಪ್ಪೊ

ಕರಡೇಯು ಕೈಯ್ಯೋ ನಿಲುಸ್ರಪ್ಪೊ ಅಂತೇಳಿ
ಬಾಲಾ ನಿಂಗಣ್ಣೋ ನುಡುದಾನೆ

ಉಪ್ಪರಿಗೆ ಒಳಗೀರೋಳೆ ಒಪ್ಪವಳ್ಳಿ ಕಾಮಾಲೆ
ತಪ್ಪಾನೇಳವ್ವೋ ಬೆಳಗಾದೊ–ತಾಳೀಕಟ್ಟೆ
ದೊಡ್ಡಪ್ಪನಂತೆ ನಮಗೆಲ್ಲೊ

ದೊಡ್ಡಪ್ಪನಂತೆ ನಮುಗೆಲ್ಲೊ ತಾಳೀಕಟ್ಟೆ
ಗಯವಾದನಂತೆ ರಣುದಾಗೆ–ನಮ್ಮವ್ವ
ಗಡಿನಾಡಿಗು ನನ್ನ ಕಳಿಕೊಡೆ

ಒಪ್ಪೊಳ್ಳಿ ಕಾಮಾಲೆ ಇದ ಕೇಳೆ ನಮ್ಮವ್ವ
ದೊಡ್ಡಪ್ಪನಂತೆ ನಮುಗೆಲ್ಲ–ತಾಳೀಕಟ್ಟೆ
ಮತುನಾದನಂತೆ ರಣುದಾಗೆ

ಮತುನಾದನಂತೆ ರಣುದಾಗೆ ನಮ್ಮವ್ವ
ಕಾಳುಕ್ಕೆ ನನ್ನ ಕಳಿಕೊಡೆ–ಅಂತೇಳಿ
ಬಾಲಾ ನಿಂಗಣ್ಣ ನುಡುದಾನೆ

ವದ್ದೊದಿಕೆ ಮಾಸ್ಯಾವೆ ಬದ್ದೋರಿ ನಿನ್ ಕೇಳೆ
ಇದ್ದಾನೇನರಸಿ ಮಡಿವಾಳ–ದೆಂದೂರ
ಮಡಿವಾಳನೋಗಿ ಕರುತಾರೆ

ನಿಂಗಣ್ಣೇಳಿದ ಮಾತು ಪಿಟ್ಟರಸಿ ಕೇಳ್ಯಾಳೆ
ವಾದಳು ದಂದೂರ ಒಳವೀಗೆ

ಜಾಗುತ ಜಳುಕುತೊ ಜಾಗೂತ ಜಗ್ಗೂತ
ಜರತಾರ ನೆಲಕೆ ಎಳಲೂತ–ಪಿಟ್ಟವ್ವ
ಹೋಗಿ ಮಡಿವಾಳನ ಕರುತಾಳೆ

ಎಂದೂ ಬಾರದ ಪಿಟ್ಟವ್ವ ಹೀಗ್ಯಾಕೆ ಬಂದೆವ್ವ
ಕುಂಡಾರಗೊಳ್ಳೆ ಮಣಿಗಾಳ

ಕುಂಡ್ರಾಕೆ ಬಂದಿಲ್ಲೋ ನಿಲ್ಲಾಕೆ ಬಂದಿಲ್ಲೊ
ಬಂದೋಗು ಬಾರೋ ಮನಿಮುಂಟ

ಬಂದಾನೆ ಮಡಿವಾಳ ನಿಂದಾನಂಗುಳುದಾಗೆ
ನಿಂಗಣ್ಣ ಗೆ ಕರವ ಮುಗುದು–ಕೇಳ್ಯಾನಲ್ಲೆ
ಕರಸೀದ ಕಾರುಣದ ಬಗಿಯೇಳು

ನಾಳೀಕೆ ನಾವು ಕಾಳುಕ್ಕೋಗುತೀವಿ
ಬರುತೀಯೇನಯ್ಯೋ ಮಡಿವಾಳೊ

ಇಂದೇನೆ ನಾವು ದಂಡಿಗೋಗುತೀವಿ
ಬರುತೀಯೆನಯ್ಯೋ ಮಡಿವಾಳೊ

ಕಾಳುಗೆಂಬುದು ಸ್ವಾಮಿ ಕಾವೇರಿ ಪಟ್ಟಣ
ಗುಂಡು ತಾಕಿದುರೆ ಸತಗಾತು–ನಿಂಗಣ್ಣ
ಮಕ್ಕಳಿಗಿನ್ನಾರು ವಡಿಕ್ಕಾರ್‍ರು

ಕಾಳುಗಂಬುದು ಸ್ವಾಮಿ ಗಂಡುಗಾರೇ ಮುಳ್ಳು
ಗುಂಡು ತಾಕಿದುರೆ ಸತಗಾತು–ನಿಂಗಣ್ಣ
ಮಕ್ಕಳಿಗಿನ್ನ್ಯಾರು ವಡಿಕ್ಕಾರ್‍ರು

ವಾದಾ ದಂಡಿನಾಗೆ ತೀರಿದ್ದುಂಟಾದರೆ
ಯಂಬತ್ತೆ ಹೊನ್ನು ಪಡಿಗಟ್ಟೆ–ತಾಳೀಕಟ್ಟೆ
ತಂದೆ ದಳದಾಗೆ ಕೊಡಸೂವೆ

ನಮು ತಂದೆ ದಳದಾಗೆ ಕೊಡಸೂವೆ ಮಡಿವಾಳ
ಬರತೀಯೇನಯ್ಯ ನಮುಕೂಟಿ

ದಂದೂರು ಅಂಭೋದು ಗಂಡುಭೂಮಿ ಕೊಡುವೆ
ಹಿಂಡೀನ ಕುರಿಯೋ ಹೊಡಕೊಡುವೆ–ಮಡಿವಾಳ
ಮಾನ್ಯಾವಾಕುಸುವೆ ಮಗನೀಗೆ

ಮಾನ್ಯಾವಾಕುಸುವೆ ಮಗನೀಗೆ ಮಡಿವಾಳ
ಮಾನ್ಯಾವ್‌ದೊಕ್ಕಾಲ ಕೊಡುತೀನಿ–ಮಡಿವಾಳ
ಬರುತೀಯೇನಯ್ಯೋ ನಮುಕೂಟಿ

ಗೋಪಿಕೆರಿಯುಯ್ಯೋ ಸಾಸ ಬಲ್ಲಿಗ ಕಾಣೆ
ಕಾತೆ ನೀನೋಗಿ ಕರುತಾರೆ–ಅನ್ನೇನಳ್ಳಿ
ಜಾಲ್ಯಾಗೆ ವಾಲೆ ಬರಿಯೋರೆ

ಈರಕಾಮುಯ್ಯೋ ಮಾತೀಲಿ ಸುಗಜಾಣ
ನಲ್ಲೆ ನೀನೋಗಿ ಕರುತಾರೆ–ಈರಾಪುರದ
ತುರುಮಂದ್ಯಗ್ವಾಲೆ ಬರಿಯೋರ

ಚಳ್ಳಿಕೆರೆಯುಯ್ಯೋ ಮಾತೀಲಿ ಸಮರಂತ
ನಲ್ಲೆ ನೀನೋಗಿ ಕರುತಾರೆ–ಈರಾಪುರದ
ಹಳ್ಳೊಲ್ಲಾಗ್ವಾಲೆ ಬರೆವೋರ

ಕಾತುರದ ಸೀಮ್ಯಾಗೆ ಮಾತುಗಾರ್ ಮುಗಳೀ ತಿಮ್ಮಣ್ಣ
ಕಾತೆ ನೀನೋಗಿ ಕರುತಾರೆ–ಈರಾಪುರದ
ತೊಪ್ಪಿನಾಗೆ ವಾಲೆ ಎರೆವೋರ

ವೀರ ಬಸವಣ್ಣೋ ಮಾತೀ ಸುಗಜಾಣ
ಕಾತೆ ನೀನೋಗಿ ಕರುತಾರೆ–ಈರಾಪುರದ
ತೊಪ್ಪಿನಾಗೆ ವಾಲೆ ಬರೆವೋರ

ಏಳೂರ ಮೈದುನುರ ಕರುದೋನೆ ಬರುತೀನಿ
ಮುಗುಳೀ ಮೈದುನರೊ ಕರಿಲಾರೆ–ನಾನೀಗ
ಬೆಂಕಿಯಿದುರೀಗೆ ನಿಲುಲಾರೆ

ಏಳೂರು ಮೈದುನುರು ಕರುದೇನು ಮಾರಾಯ
ಮುಗುಳೀ ಮೈದುನುರೊ ಕರಿಲಾರೆ–ಮಾರಾಯ
ಜೋಡೀನ ವಾಲೆ ಬರಿಯೊಂದು

ಚಿಕ್ಕಾನೆ ಶಿವನೇಯೊ ಚಿಕ್ಕಳ್ಳಿ ಮರದಡಿಯ
ಏಳೂರು ಮಾನ್ಯವ್ರಿಗೆ ಸದುರಾದೊ–ಬರುದಾರಲ್ಲೀ
ತಿಮ್ಮಣ್ಣಗ್ವಾಲೆ ಬರುದಾನೆ

ರಾಯ ಶಿವನೇಯೊ ಜೋಡಾಲದ ಮರದಡಿಯ
ಸುತ್ತಲ ಮಾನ್ಯವ್‌ರಿಗೆ ಸದುರಾಗಿ–ಬರುದಾರಲ್ಲೆ
ತಿಮ್ಮಣ್ಣಗ್ವಾಲೆ ಬರುದಾರೆ

ಜೋಡೀನ ವಾಲೇ ಬರುದಾನೆ ನಿಂಗಣ್ಣ
ವಾಲೇಯ ಆಗ ಕಳುವ್ಯಾನೆ

ನಿತ್ತುದ ಕೋಲುಕಾರುನ ಕರಿಸ್ಯಾನೆ ನಿಂಗಣ್ಣ
ವಾಲೇಯ ಆಗ ಕಳುವ್ಯಾನೆ

ಜೋಡೀನ ವಾಲೇ ತಕ್ಕೊಂಡು ಕೋಲುಕಾರ
ತಿಮ್ಮಣ್ಣಗ್ವಾಲೆ ಕೊಡುತಾನೆ

ಕೊಟ್ಟಂತ ವಾಲೆಯೋ ಇಸಗಂಡು ತಿಮ್ಮಣ್ಣ
ವಾಲೇಯ ವಡುದು ಓದಿಕ್ಯಂಡು–ತಿಮ್ಮಣ್ಣ
ಸುಂಗಾರವಾದ ಮುಗುಳ್ಯಾಗೆ

ಸುಂಗಾರವಾದೋ ಮುಗುಳ್ಯಾಗೆ ತಿಮ್ಮಣ್ಣ
ಏಳೂರ ಮಾನ್ಯವ್ರೇ ಬರುತಾರೆ

ಕರಿ ಎಲಿಯ ಕಾಮು ಬಾರೋ ಗೋಷಯ್ಯ
ಎಳಿಯ ಹೊಂಬಾಳೆ ಬಾರೋ

ಅರಗೀದ ವಲದಾಗೆ ಬರಗೀನ ಕೂಳ್ಯಾಗೆ
ಬರಿಯ ರಾಜಣುದ ಬಯಲಾಗೆ–ಗೋಷಯುನ
ಅಂದಲ ಸಾಲಿಟ್ಟೇ ಬರುತಾವೆ

ಅಂದಲ ಸಾಲಿಟ್ಟೇ ಬರುತಾವೆ ಗೋಷಯ್ಯ
ನಿಲ್ಲುದುಲೆ ಹೊಕ್ಕ ಶಿವನೀಗೆ.

ಬಂದ ತವರ್ಮ್ಯಾಗೆ ಶರಣು ಸಂಪತ್ತಾಗಿ
ಬರತದು ಡೀರ್‍ಯೇವುದ ಒಳವೀಕೆ

ಹಳದಿ ಡೀರ್‍ಯೇವು ಹೊಡಸೀದ ನಿಂಗಣ್ಣ
ತವರ್ಮನೊಳವೀಕೆ ಕರುದಾನೆ

ಹತ್ತೀಯ ಹೊಲದಾಗ ಭತ್ತಾದ ಕೂಳ್ಯಾಗೆ
ಬುಟ್ಟ ರಾಜಣುದ ಬಯಲಾಗೆ–ಈರಕಾವುಯ್ಯನ
ಪಲ್ಲಕ್ಕಿ ಸಾಲಿಟ್ಟೇ ಬರುತಾವೆ

ಪಲ್ಲಕ್ಕಿ ಸಾಲಿಟ್ಟೇ ಬರುತಾವೀರಕಾವುಯ್ಯ
ನಿಲ್ಲುದಲೇ ಬಂದ ಶಿವನೀಗೆ.

ನಿಲ್ಲುದಲೇ ಬಂದ ವೀರಕಾವುಯ್ಯ
ಅವ್ರಣ್ಣಾ ತವರ್ಮ್ಯರಿಗೆ ಶರಣಾರ್ಥಿ

ಬಂದಾ ತವರ್ಮ್ಯಾಗೆ ಶರಣು ಸಂಪತ್ತಾಗಿ
ಬರತವು ಡೀರ್‍ಯೇವುದ ಒಳವೀಕೆ

ರಾಯು ಗಡೀಹಳ್ಳಿ ಹೊಂಡಾದೇರಿವ್ಯಾಲೆ
ತಂಬುಟದ ಹುಂಡೆ ನೆಲಬೋರೆ–ತಗುದಂಗೆ
ಈರಾ ಬಸವಣ್ಣ ಹೊರಟಾನೆ

ಒಕ್ಕಾಳ ಹುರಿಗೆಜ್ಜೆ ಒಕ್ಕಾಳ ಕಿರಿಗೆಜ್ಜೆ
ಚೊಕ್ಕ ಚಿನ್ನುದಲೇ ಮುಕರಂಭ–ಗಡೀಹಳ್ಳಿ
ಚನ್ನಾ ಬಸವಣ್ಣ ಬರುತಾನೆ

ನಾಗಾಳ ಹುರಿಗೆಜ್ಜೆ ನಾಗಾಳ ಕಿರಿಗೆಜ್ಜೆ
ನಾಗಾಭರಣದ ಹಣೆಹಗ್ಗ–ತಡುಗಾದ
ಹುಚ್ಚೂರು ಬಸವಣ್ಣ ಬರುತಾನೆ

ಹುಚ್ಚೂರು ಬಸವಣ್ಣ ಬರುತಾನವನೀಪಾರು
ನಿಲ್ಲುದಲೆ ಹೊಕ್ಕು ಶಿವನೀಗೆ

ಬಂದ ತಮ್ಮುರಿಗೆ ಶರಣು ಸಂಪತ್ತಾಗಿ
ಬರತವು ಡೀರ್‍ಯೇವ್ರುದ ಒಳವೀಕೆ

ಪಟ್ಟೇ ಡೀರ್‍ಯೇವು ಹೊಡಸೀದ ನಿಂಗಣ್ಣ
ಕತ್ತೀಲಿ ಪಾರ ಹಿಡಿಸ್ಯಾನೆ

ಕಂಸಾಗರದಯ್ಯೋ ಬರುತಾನೆ ಆಗಿನ್ನು
ನಿಲ್ಲುದಲೆ ಬಂದ ಶಿವನೀಗೆ

ಬಂದ ತಮ್ಮಾಗೆ ಶರಣು ಸಂಪತ್ತಾಗಿ
ಬರತವು ಡೀರ್‍ಯೇವ್ರುದ ಒಳವೀಕೆ

ಏಳೂರ ತಮ್ಮುಗಳೆ ಎಲ್ಲೋರು ಬಂದಾರೆ
ಮುಗಳೀಯ ತಮ್ಮಾ ಬರಲಿಲ್ಲ

ಜತ್ತೀನ ಸಂಕು ವತ್ತುಲಿಸಿ ಹಿಡಿಯೋನೆ
ಕರಡೆ ವಾದ್ಯವುಕೆ ಮರುಗೋನೆ–ಮುಗಳೀಯ
ಈರದಿಮ್ಮಣ್ಣ ಬರಲಿಲ್ಲೊ

ಜೋಡೀನ ಸಂಕು ವಾವುಲಿಸಿ ಹಿಡಿಯೋನೆ
ಈರ ವಾದ್ಯವುಕೆ ಮರುಗೋನೆ–ಮುಗಳೀಯ
ಈರ ದಿಮ್ಮಣ್ಣೊ ಬರಲಿಲ್ಲೊ

ಈರದಿಮ್ಮಣ್ಣೊ ಬರಲಿಲ್ಲ ಅಂತೇಳಿ
ಶಿವನೇ ನಿಂಗಣ್ಣೇ ನುಡುದಾನೆ

ನೀರಗಾಡೋದು ಎಡೆಗೆರಾಜಣದಕ್ಕಿ
ಹಿಡುದನ್ ನನ್ನರಸೋ ದಳವಾಯಿ ತಿಮ್ಮಣ್ಣಾಗೆ
ಬೋಮಸದಿಳ್ಳೇವು ಕೊಡಿರಯ್ಯೊ

ನೀರಗಾಡೋದು ಸಿದ್ದನೀಲದ ಕುದುರೇಯ
ಕರೆದು ಮಯ್ ತೊಳದೆ ಕುರತಿಟ್ಟು–ತಿಮ್ಮಣ್ಣ
ಅಪ್ಪನ ಕಾಳುಕ್ಕೆ ನಡಿಯೆಂದ

ಕಟ್ಟ್ಯಾಗಾಡೋದೆ ಸಿದ್ದು ನೀಲದ ಕುದುರೇಯು
ಉಜ್ಜಿ ಮಯ್ಯ್ ತೊಳದ ಕುರತಿಟ್ಟು–ತಿಮ್ಮಣ್ಣ
ತಂದೆ ಕಾಳುಕ್ಕೆ ನಡಿಯೆಂದ

ಅಂಗಿಯಿಟ್ಟೈದಾನೆ ಸುಂಗಾಸುತ್ತೈದಾನೆ
ಸುಂಗಾಬಿಟ್ಟಾನೆ ನವಲಂಗ

ಹಾಲಾಕುಡಿಯೋರೆ ಲೋಲಾಟ ಆಡೋರೆ
ಬಾರಾಗಿ ನುಡಿಯೋ ನುಡಿಸೋರೆ–ಅಂಬಾರಳ್ಳಿ
ಯೇಗಿ ಸಿದ್ದಯ್ಯೋ ಬರುತಾರೆ

ಬಂಗೀಯ ಸೇದೋರೆ ಬಿಂಗ್ಯಾಟ ಆಡೋರೆ
ರುದ್ರಾಗಿ ನುಡಿಯೋ ನುಡಿಸೋರೆ–ಅಂಬಾರಳ್ಳಿ
ಜಂಗಮ ಸಿದ್ದಯ್ಯೋ ಬರುತಾರೆ

ಬೆಳ್ಳೀಯ ದೀವುಟಿಕೆ ಬಿಲ್ಲೊಂದು ಸಾವೂರ
ಗಲ್ಲುಗಲ್ಲಿಂಬೋ ಹುರಿಗೆಜ್ಜೆ–ಗೊರನಾಕಲ್ಲ
ವಲ್ಲಬ ಸಿದ್ದಯ್ಯೋ ಬರುತಾರೆ

ಬಂದಂತ ತಮ್ಮುರಿಗೆ ಶರಣು ಸಂಪತ್ತಾಗಿ
ಬರಿತಮ ಡೀರೈವುದ ಒಳವೀಕೆ

ಏಳೂರ ಮಾನ್ಯವುರೇ ಶಿವನೇಯ ವುರಮುಂದೆ
ಶಿವನೇ ವುರಮುಂದೆ ಬರುತಾರೆ

ಬಡಗ್ನಿಂದ ಬಂದೆವಪ್ಪೊ ಎಂಬತು ಬಾಣಾದೇರು
ಸ್ವಾಮಿ ನಿಂಗಣ್ಣೋ ಬೆಲಿಮಾಡಿಕೊಂಡಾನಲ್ಲೆ
ಕಾಳುಗುತಕ್ಕಾದೋ ದವುನಾವೊ

ತೆಂಕಲಿಂದ ಬಂದೇವಪ್ಪೊ ನಲವತು ಬಾಣಾದೇರು
ಸ್ವಾಮಿ ತಿಮ್ಮಣ್ಣೋ ಬೆಲಿಮಾಡಿಕೊಂಡಾನಲ್ಲೆ
ಅವ್ರಾಯುದಕೆ ತಕ್ಕಾದೊ ದವುನಾವೊ

ಹತ್ತೀಯ ಮರದಡಿಯೊ ಇಟ್ಟಾರೆ ಕುಲುಮೇಯು
ಹತ್ತಿ ತಲ್ಲಣಿಸಿ ನಡುಗ್ಯಾವೆ–ಗೋಷಯ್ಯಾನ
ಕಟ್ಟಿಲಗು ಸಾಣಿ ಹಿಡುದಾವೆ

ಆಲಾದ ಮರದಡಿಯೋ ಹೂಡ್ಯಾರೆ ಕುಲುಮೇಯ
ಆಲು ತಲ್ಲಣಿಸಿ ನಡುಗ್ಯಾವೆ–ಈರಕಾಮಯ್ಯಾನ
ಜೋಡಲಗು ಸಾಣಿ ಹಿಡುದಾವೆ

ನಿಂಬೇಯ ಮರದಡಿಯೋ ಹಣ್ಣ್ಯಾರೆ ಕುಲುಮೇಯ
ನಿಂಬೆ ತಲ್ಲಣಿಸಿ ನಡುಗ್ಯಾವೆ–ನಿಂಗಣ್ಣಾನ
ಜೋಡಲಗು ಸಾಣಿ ಹಿಡುದಾವೆ

ಅಳ್ಳೀಯ ಮರದಡಿಯೋ ಹಣ್ಣ್ಯಾರೆ ಕುಲುಮೇಯ
ಅಳ್ಳಿ ತಲ್ಲಣಿಸಿ ನಡುಗ್ಯಾವೆ–ಮುಗುಳಿ ತಿಮ್ಮಣ್ಣಾನ
ಕಟ್ಟಲಗು ಸಾಣಿ ಹಿಡುದಾವೆ

ಅಪ್ರುಪ್ರ ಕತ್ತೀಯ ಸಾಣೀಯ ಹಿಡಿಸ್ಯಾರೆ
ಏನೊಂದೆ ಅಪ್ರೇ ನುಡುದಾರೆ

ಏಸೋಸು ಸಾವ್ರಾವು ಏಸೋಸು ಲಕ್ಸಾವು
ಯಾರ್ಯಾರಿಗೇ ನೀವು ಇರಲ್ರಿಯ್ಯೋ

ಕತ್ತೀ ಕಿತ್ತಾನೆ ಕಲಮ್ಯಾಲೆ ಇಟ್ಟ್ಯಾನೆ
ನೆತ್ತೀಯ ಜುಂಜೋ ವದುರ್ಯಾವೆ–ಗೋಷಯ್ಯ
ಇಪ್ಪತ್ತೆ ಸಾವ್ರೇ ಇರಲ್ರಿಯ್ಯೋ

ಕಂಡೇವ ಕಿತ್ತಾನೆ ಬಂಡೇ ಮ್ಯಾಲಿಟ್ಟ್ಯಾನೆ
ಮಂಡೇಯ ಜುಂಜೋ ವದುರ್ಯಾವೆ–ಮುಗಳೀ ತಿಮ್ಮಣ್ಣ
ಮಿಕ್ಕಿ ಮೀರಿದ್ದೇ ನಮಗಿರಲಿ

ಮಿಕ್ಕಿ ಮೀರಿದ್ದೇ ನಮಗಿರಲಿ ಅಂತೇಳಿ
ಈರ ದಿಮ್ಮಣ್ಣೋ ನುಡುದಾನೆ

ಏಳೂರು ಮಾನ್ಯವುರೊ ಕರಕಂಡು ನಿಂಗಣ್ಣ
ಅರಮನಿಗೆ ಆಗ ಬರುತಾನೆ

ಹೆತ್ತವ್ವ ಕಾಮಾಲೆ ಒತ್ತೀಲಿ ಸುಣ್ಣಾ ತಾರೆ
ಮುಂದಾಲ ಗರತಿ ಬಳಿಚಾರೆ–ನಮ್ಮವ್ವ
ಜೋಡೀನ ತಮ್ಮೋರೆ ಬರುತಾರೆ

ಹಡದವ್ವ ಕಾಮಾಲೆ ನೀರು ಸುಣ್ಣಾತಾರೆ
ದಾರುವಂದಾವ ಬಳಿಬಾರೆ–ನಮ್ಮವ್ವ
ಏಳೂರು ಮಾನ್ಯವ್‌ರೇ ಬರುತಾರೆ

ಏಳೂರು ಮಾನ್ಯವುರೇ ಅರಮನಿಗೆ ಬಂದಾರೆ
ಬಾಲಾ ನಿಂಗಣ್ಣೋ ನುಡುದಾನೆ

ಹೆತ್ತವ್ವ ಕಾಮಾಲೆ ಇತಕೇಳೆ ನನಮಾತ
ಗಾಡಾನೊಂದಡಿಗೆ ದುಡುಮುವ್ವೋ

ಏಳೂರು ಮಾನ್ಯವುರೇ ಅತ್ತಾರೆ ನಮ್ಮವ್ವ
ಗಾಡಾನೊಂದಡಿಗೆ ದುಡುಮುವ್ವೋ

ದೇವಾರ ಗುಡಿಯಾಗೆ ದೇವಂಗದ ಕಲ್ಲಳ್ಳು
ಬಾರೀಯು ವನಕೆ ಬಲಗೈಲಿ–ಕಾಮುವ್ವ
ಆಡುತ್ಯಾಲಕ್ಕಿ ತುಳುಸ್ಯಾಳೆ

ಆಡುತ್ಯಾಲಕ್ಕಿ ತುಳುಸ್ಯಾಳೆ ಕಾಮುವ್ವ
ಯಾವ ಮಾನ್ಯವ್‌ರಿಗೇ ಅವತೋಳ

ಯಾವ ಮಾನ್ಯವ್‌ರಿಗಂದ್ರೆ ಏನ ಹೇಳಲಿ ಸ್ವಾಮಿ
ಲಕ್ಕಾಕೆ ಕೊಂಡು ಎಳಗಾನೆ ಮ್ಯಾಲೇ ಬರೊ
ಈರದಿಮ್ಮಣ್ಣಗೆ ಅವತೋಳ

ನಿಂಗಣ್ಣನ ಗುಡಿಯಾಗೆ ನಿಂದಕ್ಕಿ ತುಳುಸೋಳೆ
ಬಾಲರಾಜಣವ್ವೋ ತುಳುಸೋಳೆ–ಪಿಟ್ಟವ್ವ
ಎತ್ತಲ ಮಾನ್ಯವ್‌ರಿಗೇ ಅವತೋಳ

ಯಾರಿಗೆ ಅಂದ್ರೆ ನಾನು ಏನ ಹೇಳಲಿ ಸ್ವಾಮಿ
ಲಕ್ಕಾಕೆ ಕೊಂಡು ಎಳಗಾನೆ ಮ್ಯಾಲಿರೊ
ಈರಕಾಮಯ್ಯಾಗೆ ಅವತೋಳ

ನಿಂಗಣ್ಣನ ಗುಡಿಯಾಗೆ ನಿಂದಕ್ಕಿ ತುಳುಸೋಳೆ
ಬಂದ್ರಲ್ಲೇ ನಿನ್ನ ತವರೋರು–ತೊಯ್ಯಿನ ಕುರುಬುರ್‍ರು
ನಿಂಬೆ ಹಣ್ಣಿಗಿಂತ ಚೆಲುವಾರೆ.

ಬಾಳೆ ವನುದಾಗೆ ಬಾಲರಾಜಣವ ತುಳಿಸೋಳೆ
ವಕ್ಕರಲ್ಲೇ ನಿನ್ನ ತವರೋರು–ತೊಯ್ಯಿನ ಕುರುಬ್ರು
ಬಾಳೆ ಹಣ್ಣಿಗಿನ್ನ ಚಲುವಾರೆ

ಒಕ್ಕಾಳಕ್ಕೀಗೆ ಇಕ್ಕಾಳಾಲಾ ಹೊಯ್ದು
ತಪ್ಪಾನೊಂದಡಿಗೆ ದುಡುವ್ಯಾರೆ
ನಾಗಾಳಕ್ಕೀಗೆ ಐಗೊಳಾಲಾ ಹೊಯ್ದು

ಗಾಡಾನೊಂದಡಿಗೆ ದುಡುವ್ಯಾರೆ–ಕಾವುವ್ವ
ಸೊಸಿಯೇ ಪಿಟ್ಟವ್ವಗೆ ಹೇಳುತಾಳೆ
ಏಳೂರು ಮಾನ್ಯವ್ರಿಗೇ ಚಿನ್ನಾದ ಗಿಂಡ್ಯಾಗೆ

ಪನ್ನೀರ ದಾರೆ ಕೊಡುಬಾರೆ
ಚಿನ್ನಾದ ಗಿಂಡ್ಯಾಗೆ ಪನ್ನೀರ ತಕ್ಕೊಂಡು
ರಾಯಾರ್ವಾಲ್ಯವುಕೇ ನೆರುದಾಳೆ

ಚಿನ್ನಾದ ಗಿಂಡ್ಯಾಗೆ ಪನ್ನೀರ ತಕ್ಕೊಂಡು
ಗಂಡನ ಮುಂದಾಕೆ ಇಡುತಾಳೆ
ಏಳೂರ ತಮ್ಮುರ ಬಿಟ್ಸು ನನಿಗೇ ಕೊಟ್ಟಾಳೆಂದು

ಆಗ ನಿಂಗಣ್ಣೋ ನುಡುದಾನೆ
ಜೋಡೀನ ತಮ್ಮುರ ಬಿಟ್ಟು ನನಿಗೇ ಕೊಟ್ಟಾಳೆಂದು
ಮುತ್ತೀನ ಕ್ವಾಲ್ಡಿಗಳ ಹಿಡುದೆದ್ದ–ಪಿಟ್ಟರಸಿ
ಅವ್ರತ್ತೀಯ ಹೋಗಿ ಮರಿಬಿದ್ದೊ

ಆಗ ಅರಿಯದೋಳು ಈಗ ತಿಳಿಯದೋಳು
ಏನೇನೂ ಅರಿಯೋ ನನಸ್ವಾಸೆರ–ನಿಂಗಣ್ಣ
ನಿನ್ನ ಕ್ವಾಲ್ಡೀಯು ಕಯ್ಯ ಮುದುರಪ್ಪ

ಹಿಂದೆ ಅರಿಯದೋಳು ಮುಂದೆ ತಿಳಿಯದೋಳು
ಏನೇನೂ ಅರಿಯೋ ನನಸ್ವಾಸೆ–ನಿಂಗಾಪ್ಪ
ನಿನ್ನ ಕ್ವಾಲ್ಡೀಯು ಕಯ್ಯ ಮುದುರಪ್ಪೊ

ನಿನ್ನ ಕ್ವಾಲ್ಡೀಯು ಕಯ್ಯ ಮುದುರಪ್ಪೋ ಅಂತೇಳಿ
ಕಾವುವ್ವ ಆಗ ನುಡುದಾಳೆ

ಚಿನ್ನಾದ ಗಿಂಡ್ಯಾಗೆ ಪನ್ನೀರ ತಕ್ಕೊಂಡು
ಏಳೂರ ಮಾನ್ಯವ್ರಿಗೇ ಕೊಡುತಾಳೆ

ಅಂತ್ಯಗುಂಬೋರೇಳ್ರಿ ಪಂಕ್ತಿಗುಂಬೋರೇಳ್ರಿ
ಮಂತುರಿ ನಿಂಗಣ್ಣನ ಬಲಬೇರಿ–ಉಂಬಂತ
ಈರ ಜಂಗಮರೇಳ್ರಿ ಅಡಿಗ್ಯಾತು

ಎಡದೀಲುಂಬೋರೇಳ್ರಿ ಬಲದೀಲುಂಬೋರೇಳ್ರಿ
ಬಾಲಾನಿಂಗಣ್ಣನ ಬಲಬೇರಿ–ಉಂಬಾಂತ
ಲಿಂಗಜಂಗಮರೇಳ್ರಿ ಅಡಿಗ್ಯಾತು

ಅಕ್ಕಸ್ತ ಯಡಿಯಾತು ಪಣಿಗಂದ ಯಡಿಯಾತು
ಸಾಣೇಕಲ ಮ್ಯಾಲೆ ಯಡಿಯಾತು–ಏಳೂರ
ಈರ ಜಂಗಮರೇಳ್ರಿ ಅಡಿಗ್ಯಾತು

ಈರ ಜಂಗಮರೇಳ್ರಿ ಅಡಿಗ್ಯಾತು ಶಿವನೇಯ
ಕಾಮವ್ವ ನೀರ ಕೊಡುತಾಳೆ

ಏಳೂರ ಮಾನ್ಯವುರೇ ಉಟಾವ ಮಾಡ್ಯಾರೆ
ತಾಂಬೂಲ ಅವುರೇ ಹಾಕುತಾರೆ

ಚಿನ್ನಾದ ಗುಡಿಗೂಡಿ ಹೊನ್ನೀ ನೊಗೇಸೊಪ್ಪ
ನನ್ನವ್ವ ಬೆಂಕಿ ಕೊಡುಬಾರೆ–ಏಳೂರ
ತಮ್ಮಗಳೇ ಹೊಗೆಯ ಬಿಡುತಾರೆ

ಕಂಚೀನ ಗುಡಿಗೂಡಿ ಹೊನ್ನೀನೊಗೇಸೊಪ್ಪ
ದೊಡ್ಡವ್ವ ಬೆಂಕಿ ಕೊಡುಬಾರೆ–ಏಳೂರ
ಮಾನ್ಯವುರೇ ಹೊಗಿಯಾ ಬಿಡುತಾರೆ

ಪಟ್ಟೇಯ ಸೀರ್ಯಾಗೆ ಕಟ್ಟವ್ವ ಬುತ್ತೀಯ
ಇಪ್ಪಾತ್ತೆ ದಿನೋ ಅಳಸಾದಂತಾ–ಬುತ್ತೀಯ
ಹಣ್ಣವ್ವಾನ್ವೇರಿ ಜಗಳಾಕೆ

ಹಣ್ಣಾವ್ವಾನ್ವೇರಿ ಜಗಳಾಕೆ ನಮ್ಮವ್ವ
ಗಡಿನಾಡಿಗು ನನ್ನ ಕಳಿಕೊಡೆ

ನಿಂಬೇ ಹಣ್ಣೀನಂಗೆ ತುಂಬಿದ ಮಯ್ ನನಸ್ವಾಸೆ
ಕೆಂಜಾಡೆ ಬೆನ್ನೋ ವಲುವುತೊ–ನಿಂಗಪ್ಪ ನಿನ್ನ
ಮಡದೀಯ ನೋಡಿ ಉಳಿದೊರಿಯೆ

ಬಾಳೇಹಣ್ಣೀನಂಗೆ ಬಾಗಿದ ಮಯ್ ನನಸ್ವಾಸೆ
ಕಿರಿಜಾಡೆ ಬೆನ್ನೋ ವಲುವುತೋ–ನಿಂಗಣ್ಣ
ನಾರೀಯ ನೋಡಿ ಉಳಿದೊರಿಯೆ

ನಾರಿಯೆಂಬುಳು ನನಗೆ ಹಡದಳ ಸಾಮಂದ
ರಾಯ ದೊಡ್ಡಪ್ಪನ ಜಲಮ್ಮುಂದೆ–ಇದ್ದಾರೆ
ದುಬ್ಬಗೌಡೇರ ಬಲತರುವೆ

ಮಡುದಿಯೆಂಬಳು ನನಗೆ ಹಡದಳ ಸಾಮಂದ
ಸತ್ಯೋನ್ ದೊಡ್ಡಪ್ಪನ ಜಲಮ್ಮುಂದೆ–ಇದ್ದಾರೆ
ಮೂಳಗೌಡೇರ ಬಲತರುವೆ

ಮೂಳಗೌಡೇರ ಬಲತರುವೆ ನಮ್ಮವ್ವ
ಕಾಳುಕ್ಕೆ ನನ್ನ ಕಳಿಕೊಡೆ

ಎಟು ಹೇಳಿದುರೆ ಕೇಳುವಲ್ಲೆ ನಿಂಗಣ್ಣ
ಉಂಡೋಗು ಬಾರೋ ಎದಿಯಾಲು

ನಿನಯುದಿಯಾಲ ಎಂಬೋವು ಮಾವೀನ ಕಾಯಲ್ಲೆ
ಮಾವೀನ ಕಾಯೋ ಇಸವಲ್ಲೆ–ನಮ್ಮವ್ವ
ಮಾಳಿಗ್ಗೆ ಹೋಗಿ ಕರಿಹೋಗೆ

ಮಾಳಿಗ್ಗೆ ಹೋಗಿ ಕರಿಹೋಗೆ ನಮ್ಮವ್ವ
ಗಡಿನಾಡಿಗು ನನ್ನ ಕಳಿಕೊಡೆ

ಹೆಂಡಾರಿಲ್ಲದೋನೆ ಮಕ್ಕಳಿಲ್ಲದೋನೆ
ಹೆಂಡರಿಲ್ಲಾದಾ ಅಯುಬೋಗಿ–ಮುಗಳಿ ತಿಮ್ಮಣ್ಣ
ಬಾಲಾನ ಬಿಟ್ಟೇ ನಡಿದೊರಿಯೆ

ಕತ್ತಿ ಹಿಡಿಯುದರಿಯೋ ಸಾಣಿ ತಿರುವದರಿಯೋ
ಕಾಳುಗದ ಕಯ್ಯೋ ಮೊದಲರಿಯೋ–ತಿಮ್ಮಣ್ಣ
ಪುತ್ರಾನ ಬಿಟ್ಟೇ ನಡಿದೊರಿಯೆ

ಹೆಂಡಾರಿಲ್ಲದೋನೆ ಮಕ್ಕಾಳಿಲ್ಲಾದೋನೆ
ಮಡುದೇರಿಲ್ಲಾದ ಅಯಬೋಗಿ–ಮುಗುಳಿ ತಿಮ್ಮಣ್ಣ
ಕಂದಾನ ಬಿಟ್ಟೇ ನಡಿದೊರಿಯೆ

ಹತ್ತೆಂಟು ಬಾಣೋ ಸುತ್ತುಗಟ್ಟಿ ಬರುವಾಗ
ದಿಕುದೆಪ್ಪಿ ಮಗನೆ ರಣದಾಗೆ

ಆರೇಳು ಬಾಣೋ ತೂರ್ಯಾಡಿ ಬರುವಾಗ
ಎದಿಗೆಟ್ಟ ಮಗುನೆ ರಣುದಾಗೆ

ಹತ್ತೆಂಟು ಬಾಣೋ ಸುತಿಗಟ್ಟಿ ಬರಲವ್ವ
ನನ ಬಟ್ಟೇಲಿ ಆರ ಹೊಡದೇನು—ದೊಡ್ಡವ್ವ
ಬಲಕೆ ನಿಂಗಣುನ ಕಳಿಕೋಡೆ

ಆರೇಳು ಬಾಣೋ ತೂರ್ಯಾಡಿ ಬರಲವ್ವ
ರಮದೀಲಿ ಆರ ಹೊಡದೇನು—ದೊಡ್ಡವ್ವ
ಬಲಕೆ ನಿಂಗಣುನ ಕಳಿಕೋಡೆ

ಬಲಕೆ ನಿಂಗಣುನ ಕಳಿಕೋಡೆ ಅಂತೇಳಿ
ದಂಡಿನ ದಳಪೋತಿ ನುಡುದಾನು

ಕರಿ ಎಲಿಯ ಕಾಮು ಬಾರೋ ನಿಂಗಣ್ಣ
ಎಳಿಯ ಹೊಂಬಾಳೆ ಬಾರೋ

ಸುಟ್ಟ ಸುಕ್ಕರವಾರೋ ಹುಟಿದೆಲ್ಲ ನಿಂಗಣ್ಣ
ಪಟ್ಟಾಣವೆಲ್ಲ ಹೊನ್ನೊಕ್ಕಲೆ–ನಿಂಗಣ್ಣ
ಪಟ್ಟಣಕಿನ್ನಾರೊ ಮಡಿಕ್ಕಾರರ್‍ರು

ಕಗ್ಗಾಕೆ ಕಲಿಬೀರೋ ಲೆಗ್ಗೀಗೆ ಸುರತಾಳ
ಕಗ್ಗಟ್ಟಿತವ್ವ ಶಿವುನ್ಯಾಗೆ–ಶಿವನೇ ನಿಂಗಣ್ಣ
ಒಬುತಾಯಿಗೊಬ್ಬ ಮಗನಂತೆ

ಒಬುತಾಯಿಗೊಬ್ಬ ಮಗನು ನಿಂಗಣ್ಣಾನು
ಗಡಿನಾಡ್ಯಾಜ್ಞಾಕೆ ಹೊರುಟಾನೆ–ಕಾಮವ್ವ
ಹಡದವ್ ಕಾಮಾಲೆ ಅಳುತಾಳೆ

ಹತ್ತುಂಬು ಹಿಡಿವುಗುನೆ ಮತ್ತುಂಬು ಹಿಡಿವುಗುನೆ
ರಕ್ಕಸನ ಶಿರವ ಹರದಂಬೋ–ನಿಂಗಣ್ಣ
ನಿನ್ನಪ್ಪಾನಲಗಂಬು ಹಿಡಿದೋಗೋ

ಆರಂಬು ಮೂರಂಬು ಮ್ಯಾಲೆ ಸಾವುರದಂಬು
ರಾವುಣನ ಶಿರವ ಹರದಂಬು–ಮಲ್ಡಿಪ್ಪ
ನಿಮ್ಮ ತಂದೆ ಹಲಗಂಬೊ ಹಿಡದೋಗೋ

ಆರು ತಿಂಗಳು ನಿದ್ರೆ ಆರು ತಿಂಗಾಳೆದ್ದು
ವನಮಲ್ಡಿ ದೊರಿಗೆ ಸುಖನಿದ್ರೆ–ಮಾಡುವಾಗ
ಗಡಿನಾಡ್ಯಾಜ್ಜಾಕೆ ಹೊರುಟಾನೆ

ಬಡಗಲ ರಾಯರೋ ಸಡಗರೇನಾಳಾಲಿ
ಜಾಜೀಯ ಹೂವೇ ತಲೆದಿಂಬ್–ಮಲ್ಡೀದೊರೆ
ಸಂಪತ್ತಿನ ನಿದ್ರೆ ಕೆಡಸ್‌ಲೇನೆ

ತೆಂಕಾಲರಾಯರ ಸಂಪತ್ತೇನೇಳಾಲಿ
ಸಂಪೀಗೆ ಹೂವೇ ತಲೆದಿಂಬ್ ಮಲ್ಡೀದೊರೆ
ಸಂಪತ್ತಿನ ನಿದ್ರೆ ಕೆಡಿಸ್‌ಲೇನೆ

ಸಂಪತ್ತಿನ ನಿದ್ರೆ ಕಡಿಸ್‌ಲೇನು ಅಂತೇಳಿ
ಶಿವನೆ ಕಾಮುವ್ವಗೆ ನುಡುದಾನೆ

ಹಾಲಿನ ಕಟ್ಟೇಮ್ಯಾಲೆ ನೀರು ಕಟ್ಟೇ ಕಟ್ಟಿ
ಸಾಲೀಯ ಒಗಿಯೋ ಮಡಿವಾಳ ಶಿವನೇಯ
ಹಸುಲೆ ಮ್ಯಾಲೆ ಹರವಯ್ಯೋ

ಹಸುಲೆ ಮ್ಯಾಲೆ ಹರುವ್‌ದಂತ ಗಳಿಗೇಯ
ಸಾಣಿಕಲ ಮ್ಯಾಲೆ ಗಳಿಗ್ಯಾದೊ ಏಳೂರ
ದೀರಂತರ ಕಾಸೆ ಬಿಗಿದೂಡ್ರೋ

ಕೆಸರಿನ ಕಟ್ಟೇ ಮ್ಯಾಲೆ ಮಸರಿನ ಕಟ್ಟೆ ಕಟ್ಟಿ
ದಸುರೀಯ ಒಗಿಯೊ ಮಡಿವಾಳ–ಶಿವನೇಯ
ಹಸುಲೇಯ ಮ್ಯಾಲೆ–ಹರವಯ್ಯೊ

ಹಸುಲೇಯ ವ್ಯಾಲೆ ಹರವ್‌ದಂತ ಗಳಿಗೇಯ
ಹಸೆಯ ಕಲವ್ಯಾಲೆ ಗಳಿಗ್ಯಾದೊ–ಮುಗಳೀಯ
ಈರಂತ ಕಾಸೆ ಬಿಗದೂಡೊ

ಹಳ್ಳಾದ ನೀರೀಗೆ ತೆಳ್ಳನ್ನ ಕಲ್ಲೀಗೆ
ಜಲ್ಲೀಸಿ ಕಾಯೋ ಬಿಸಲಿಗೆ–ಶಿವನೇ ನಿಂಗಣನ
ಜಲ್ಲೀ ನಾಣ್ಯಾವ್ವೆ ಮಡಿಯಾದೊ

ಹಳ್ಳಾದ ನೀರೀಗೆ ಬೆಳ್ಳನ್ನ ಕಲ್ಲೀಗೆ
ಜಲ್ಲೀಸಿ ಕಾಯೋ ಬಿಸಲೀಗೆ ಗೋಷಯ್ಯಾನ
ಜಲ್ಲೀ ನಾಣ್ಯಾವ್ವೆ ಮಡಿಯಾದೊ

ಜಲ್ಲೀ ನಾಣ್ಯಾವ್ವೆ ಮಡಿಯಾದೊ ಏಳೂರ
ದೆಸೆವಂತರ ಕಾಸೆ ಬಿಗದುಡಿರೊ

ಕಟ್ಟೇಯ ನೀರೀಗೆ ಬುಟ್ಟೊಂದು ಕಲ್ಲೀಗೆ
ಗಟ್ಟೇಸಿಕಾಯೋ ಬಿಸಲೀಗೆ ನಿಂಗಣನ
ಬಣ್ಣಾದ ನಾಣ್ಯಾವ್ವೇ ಮಡಿಯಾದೊ

ಬಣ್ಣದ ನಾಣ್ಯಾವ್ವೇ ಮಡಿಯಾದೊ ಏಳೂರ
ದೆಸೆವಂತರ ಕಾಸೆ ಬಿಗದುಡಿರೊ

ಏಳೂರ್ ಮಾನ್ಯವ್‌ರೋ ಗಡಿನಾಡಯಾಜ್ಞಾ ಕೆ
ಗಡಿನಾಡ್ಯಾಜ್ಞಾ ಕೆ ಹೊರುಟಾರೆ ಅವರಿನ್ನು
ಅವರಾನೆ ಕುದುರೆಯಾ ಹಿಡುದಾರೆ

ಆನೇಯ ಹಿಡಿರಯ್ಯೋ ಮದಸೊಂಕಿದಾನೇಯ
ತರಿಯ ಕಲ್ಲಾಗೆ ಮಣಿಯೋದೆ

ಆನೆ ನಡಸೂತ ನಿಂಗಣ್ಣ
ತಾನೇ ಮಾತಾಡೋ

ಕುದುರೆ ಕುಣುಸೂತೋ ನಿಂಗಣ್ಣ
ನಿಂತೇ ಮಾತಾಡೋ

ಒಂಟೆ ಕುಣುಸುತೋ ನಿಂಗಣ್ಣ
ನಿಂತೇ ಮಾತಾಡೋ

ಕೊಪ್ಪರಿಗೆಗಾಡೋದೆ ಹುರುಳೀಯು ಮೆಯ್ಯೋದೆ
ಕಾಳುಕ್ಕೆ ಕಾಲ ಕೆದರೋದೆ–ಶಿವನೇಯು
ಧೀರನ್ನ ಕಾಳುಕ್ಕೆ ಹಿಡಿರಯ್ಯೋ

ಕುದುರೆಯು ಹಿಡಿರಯ್ಯೋ ಮದಸೋಂಕಿದ ಕುದುರೇಯು
ಕೋಡಗಲ್ಲಾಗೆ ಕುಣಿಯೋದೆ–ಮಂಗಳೀಯು
ಧೀರನ್ನ ಕಾಳುಕ್ಕೆ ಹಿಡಿರಯ್ಯೋ

ಒಂಟೆ ಹಿಡಿರಯ್ಯೋ ಮದಸೋಂಕಿದೊಂಟೇಯು
ತರಿಯಗಲ್ಲಾಗೆ ಕುಣಿಯೋದೆ–ಅನ್ನೇನಳ್ಳಿ
ಬಂಟನ್ನ ಕಾಳಂಕೆ ಹಿಡಿರಯ್ಯೋ

ಬಂಟನ್ನ ಕಾಳುಕ್ಕೆ ಹಿಡಿರಯ್ಯೋ ಗೋಷಯ್ಯ
ಬಂಟನ್ನ ಕಾಳುಕ್ಕ ಹಿಡಿರಯ್ಯೋ

ಅವರಾನೆ ಕುದುರೆಗಳೋ ಹಿಡುದಾರೆ ಅವರೀಗ
ಗಡಿನಾಡ್ಯಾಜ್ಜಾಕ್ಕೆ ಹೊರುಟಾರೆ

ಗೆಜ್ಜೆ ಗಿಲಿಗಿಲಿಯೋ ಏಳೂರ
ಮದ್ದಾಲಿ ದಿಮಿದಿಮಿಯೋ

ಶಿವನೇಯು ಬಿಟ್ಟು ಹೊರಟು ಹೋಗುವಾಗ
ದಾನ ದರ್ಮಾವ ಕೊಡುತಾರೆ

ಹತ್ತೀಯು ಮರದಡಿಯೋ ಮುತ್ತಿನ ರಾಶಿಮಾಡಿ
ಮುತ್ತ ತಿದ್ದಿ ಸಿದ ಪ್ರಜೆಗೆಲ್ಲಾ ತಾಳೀಕಟ್ಟಿ
ನಮ್ಮ ತಂದಿಗೆಲ್ಡೆಂಟ ಬಗದೀರಿ

ನಮ ತಂದಿಗೆಲ್ಡೆಂಟ ಬಗದೀರಿ ಅಂತೇಳಿ
ದಂಡಿನ ದಳಪೋತಿ ನುಡುದಾನೆ

ಆಳಾದ ಮರದಡಿಯೋ ಹವಳದ ರಾಶಿಮಾಡಿ
ಹವಳ ತಿದ್ದಿ ಸಿದ ಪ್ರಜೆಗೆಲ್ಲಾ ತಾಳೀಕಟ್ಟಿ
ನಮ ದೊಡ್ಡಪ್ಪಗ್ಯಲ್ಡೆಂಟು ಬಗದೀರಿ

ನಮ ದೊಡ್ಡಪ್ಪಗ್ಯಲ್ಡೆಂಟು ಬಗದೀರಿ ಅಂತೇಳಿ
ಏಳೂರ ಮಾನ್ನ್ಯವ್ರೇ ನುಡುದಾರೆ

ಅಳ್ಳೀಯ ಮರದಡಿಯೋ ಹೊನ್ನರಾಶೀ ಮಾಡಿ
ಹೊನ್ನು ತಿದ್ದಿಸಿದ ಪ್ರಜೆಗೆಲ್ಲಾ–ತಾಳೀಕಟ್ಟಿ
ನಮ್ಮಪ್ಪಗ್ಯಲ್ಡೆಂಟು ಬಗದೀರಿ

ನಮ್ಮಪ್ಪಗ್ಯಲ್ಡೆಂಟು ಬಗದೀರಿ ಅಂತೇಳಿ
ಶಿವುನೆ ನಿಂಗಣ್ಣ ನುಡುದಾನೆ

ಹೋಗುನೇ ನನಮುಗುನೇ ನೀನಾದರೋಗುತೀಯು
ನಿಮ್ಮಪ್ಪಾಗೊಂದು ಮಾತ ತಿಳಿಸೋಗೋ

ಏನ ಹೇಳಿದುರೆ ಕೇಳವೊಲ್ಲೆ ನಿಂಗಣ್ಣ
ನಿಮ ತಂದಿಗೊಂದ ಮಾತ ತಿಳಿಸ್ಯೋಗೋ ಅಂತೇಳಿ
ಶಿವನೇ ಕಾಮವ್ವ ನುಡುದಾಳೆ

ಮುಂಗೈಯಳ ಸರಪೂಣಿ ಉಂಬಾಗ ತಗಿವೋನೆ
ಹಿಂದಲ ಮಾನ್ಯವುರ್ಗೆ ತೊಲಗೋನೆ–ಶಿವನೇ ನಿಂಗಣ್ಣ
ಅವ್ರಪ್ಪನ ಕಯ್ ಒಯ್ದು ನಗುತೆದ್ದ

ಮುಂಗೈಯಳ ಸರಪೂಣಿ ಯಾವಾಗ ತಗಿವೋನೆ
ಯಾವ ಮಾನ್ಯವುರ್ಗೆ ತೊಲಗೋನೆ–ಶಿವನೇ ನಿಂಗಣ್ಣ
ಅವನ್ತಂದೆ ಕಯ್ ಒಯ್ದು ನಗುತೆದ್ದ

ಏಳೂರ ಮಾನ್ಯವುರೇ ಶಿವನೇಯ ಬಿಟ್ಟಾರು
ಹೆಬ್ಬಾಗಲಾಗೆ ಬರುತಾರೆ

ಅವರ್ಯತ್ತವ್ವ ಕಾಮಾಲೆ ಮುತ್ತೇನೇಳುತಾಳೆ
ಗಿಳಿಯ ಹಿಂಡುಗಳ ಕಳುವ್ಯಾಳೆ

ಏಗಿಳಿಯೇಗಿಳಿಯೋ ಏಗಿಳಿಯೇಗಿಳಿಯೋ
ಹೋಗಿ ನಿಂಗಣುನ ತಡಿಹೋಗ್ರಿ

ಹತ್ತು ಸಾವುರ ಗಿಳಿ ತಪ್ಪೆಕಟ್ಟೇದಂಗೆ
ಬಂದು ನಿಂಗಣುನ ತಡುದಾವೊ

ಆರು ಸಾವುರ ಗಿಳಿ ಲಾವಳ ಕಟ್ಟೇದಂಗೆ
ಮತ್ತೆ ನಿಂಗಣುನೋ ತಡುದಾವೊ

ಹಾಲು ಬಾನಾನುಂಡು ನಲವತ್ತೆಳ್ಳೀವ್ ಮೆದ್ದು
ನನ್ನ ಮಾಳೀಗೆ ಒಳಗೇ ಮಡಗೀರೆ–ಆನಾವೇರಿ
ಕಾಳುಕ್ಕೆ ಹೋಗಿ ಬರಾತೀನಿ

ತುಪ್ಪಾ ಬಾನಾನುಂಡು ಇಪ್ಪತ್ತೆಳ್ಳೀವ್ ಮೆದ್ದು
ನನ್ನುಪ್ಪರಿಗೆ ಒಳಗೇ ಮಡಗೀರೆ–ಆನಾವೇರಿ
ಜಗಳಾಕೆ ಹೋಗಿ ಬರಾತೀನಿ

ಮಾತಿನವೆರಡು ಗಿಳಿಯು ಕರಕಂಡು ನಿಂಗಣ್ಣ
ಗಿಣಿ ಹಿಂಡಿಂದಾಕೆ ಕಳುವ್ಯಾನೆ–ನಿಂಗಣ್ಣ
ಹೊರಟನಾಸ್ವೇರಿ ಜಗಳಾಕೆ

ಹೆತ್ತಪ್ಪ ಕಾಮಾಲೆ ಮತ್ತಿಂಗೆ ಬಂದಾಳು
ಕಂದಾನ ಕಯ್ಯ್ಯ ಹಿಡುದಾಳೆ

ನಿಂಬೆ ಹಣ್ಣೀನಂತ ಕಂದನ ಕೈ ಹಿಡಕಂಡು
ಏಳೂರ ಮಾನ್ಯವ್‌ರಿಗೇ ಶರಣಾರ್ಥಿ–ನಿಂಗಣ್ಣ
ನಿನ್ನ ಕಾಳುಗದ ಕಯ್ಗೆ ಜಯಾಜಯೋ

ಬಾಳೇ ಹಣ್ಣೀನಂತ ಬಾಲನ ಕಯ್ ಹಿಡಕಂಡು
ಸುತ್ತುಲು ಮಾನ್ಯವ್‌ರಿಗೇ ಶರಣಾರ್ಥಿ–ನಿಂಗಣ್ಣ
ನಿನ್ನ ಕಂಡ್ಯವುದ ಕಯ್ಗೆ ಜಯಾಜಯೋ

ನಿನ್ನ ಕಂಡ್ಯವುದ ಕಯ್ಗೆ ಜಯ ಜಯ ಅಂತೇಳಿ
ಹಡದವ್ವ ಕಾಮಾಲೆ ನುಡುದಾಳೋ

ಶಿವುನೆಯ ಹೆಬ್ಬಗುಲ ಬಿಟ್ಟಾರೆ ಅವರೀಗ
ಶಿವುನೇಯ ಬಿಟ್ಟೀ ಹೊರುಟಾರು

ಕತ್ತೀಯ ಕಿತ್ತಾನು ಕಲಮ್ಯಾಲೆ ಇಟ್ಟಾನು
ನೆತ್ತೀಯ ಜುಂಜೋ ವದುರ್ಯಾನೆ–ಮುಗಳೀತಿಮ್ಮಣ್ಣ
ನಿಮ್ ಹೆಂಡಾರ ಮ್ಯಾಲೆ ಅನುಕಂದೆ

ನಿಮ್ ಮಡುದೀ ಮಕ್ಕಳ ಮ್ಯಾಲೆ ಅನುಕಂದೆ ಇದ್ದಾರೆ
ನಿಮ್ ಕುದುರೆ ಹಿಂದಾಕೆ ಶಿರಾವ್ರಯ್ಯ–ಅಂತೇಳಿ
ದಂಡಿನ ದಳಪೋತಿ ನುಡುದಾನೆ

ಕಾಳಿ ಹಿಡುದಾವೊ ಕಂಚಿನ
ಬೇರಿ ಬಡುದಾವೋ

ಸಿದ್ದ ಬೀರನ ಕಣಿವೇಗೆ ಎದ್ದವ್ ಬಾರೆ ವ್ಯಾಗೆ
ದಬ್ಬನ್ನ ದೋಣ ಬಡಿಸ್ಯಾರೆ ತಾಳೀಕಟ್ಟಿ
ಹಡವದ್ವ ತಾಯಿ ಬ್ಯದುರ್ಯ್ಯಾಳಿ

ಹಡದವ್ವ ತಾಯಿ ಬ್ಯದುರ್ಯ್ಯಾಳಿ ಬಾಳಲ ಕಣಿವೆ
ವಾರೀಲಿ ದಂಡ ತಿರುವ್ರಯ್ಯೋ—ಅಂತೇಳಿ
ದಂಡಿನ ದಳಪೋತಿ ನುಡುದಾನೆ

ಸಾತೆ ಕಲ್ಲಿನ ವ್ಯಾಲೆ ಜ್ಯೋತಿ ದಂಡಿಳುದಂಗೆ
ಏಳೂರ ಮಾನ್ಯವ್‌ರೇ ಇಳುದಾರೆ ತಾಳೀಕಟ್ಟಿ
ಹಡದವ್ವ ತಾಯಿ ಬ್ಯದುರ್ಯ್ಯಾಳಿ

ಏಳೂ ಮಾನ್ಯವ್‌ರೇ ದಂಡಾಗಿ ಹೋಗುವಾಗ
ಏನಂದೆ ಆಗ ನುಡುದಾರೆ

ಅಣ್ಣ ತಮ್ಮುರಿಗೆ ಒಮ್ಮಕ್ಕದ ಪಲ್ಲಕ್ಕಿ
ಮಾತಾಡಿ ಕಣಿವೆ ಇಳುದಾರೆ—ಆನಾವೇರಿ
ಹೊಟ್ಟೆಳ ಪಿಂಡಂಡ ನಡುಗ್ಯಾವೆ

ಹಿರಿಯೋನೆ ನಿಂಗಣ್ಣೋ ಕಿರಿಯೋನೆ ತಿಮ್ಮಣ್ಣ
ಇಬುರೊಂದೇ ಕಣಿವೆ ಇಳುದಾರೆ—ಆನಾವೇರಿ
ನಡುದಾಡೊ ಪಿಂಡೋ ನಡಿಗ್ಯಾವೆ

ಹಿರಿಬೂಲಿ ನಿಂಗಣ್ಣೋ ಕಿರುಬೂಲಿ ತಿಮ್ಮಣ್ಣೋ
ಮಾತಾಡಿ ಕಣಿವೆ ಇಳುದಾರೆ—ಆನಾವೇರಿ
ಅವರೊಟ್ಟೆಳ ಪಿಂಡೋ ನಡುಗ್ಯಾವೆ

ಜಲಕಲ ಮಲ್ಡೀ ವ್ಯಾಲೆ ದುಮುಕಿ ದಂಡಿಳುದಂಗೆ
ಏಳೂರ ಮಾನ್ಯವ್‌ರೇ ದುಮುಕ್ಯಾರೆ—ಆಗಿನ್ನು
ಬುತ್ತೀಯ ಆಗ ಉಗುಚ್ಯಾರೆ

ಹೆತ್ತಮ್ಮ ಕಟ್ಟಿದೊ ತುಪ್ಪಾದ ಬುತ್ತೀಯ
ಏಳೂರ ಮಾನ್ಯವುರೇ ಉಣುತಾರೆ

ದೊಡ್ಡವ್ವ ಕಟ್ಟೇದ ಆಲಾಗರದ ಬುತ್ತೀಯ
ಸುತ್ತಲ ಮಾನ್ಯವ್‌ರೇ ಉಣುತಾರೆ

ಏಳೂರ ಮಾನ್ಯವ್‌ರೇ ಬುತ್ತೀಯ ಉಣ್ವಾಗ
ಮತ್ತೊಬ್ಬ ತಮ್ಮ ಇಲವಂತೆ–ಗಡಿಹಳ್ಳಿ
ಈರಬಸವಣ್ಣೋ ಇಲವಂತೆ

ಹಾಲಾಗರದ ಬುತ್ತೀಯ ಉಟಾವ ಮಾಡುವಾಗ
ಮತ್ತೊಬ್ಬ ತಮ್ಮ ಇಲವಂತೆ–ಗಡಿಹಳ್ಳಿ
ಈರ ಬಸವಣ್ಣೋ ಇಲವಂತೆ

ಈರ ಬಸವಣ್ಣೋ ಇಲವಂತೆ ಶಿವನೇಯ
ಬಾಲಾ ನಿಂಗಣ್ಣ ನೋಡುತಾನೆ

ರಾಯ ಶಿವನೇಯೋ ಹೊಂಡಾದಾದೇರೀ ಮ್ಯಾಲೆ
ಗಲ್ಲ ಗಲ್ಲೆಂಬೋ ಹುಲಿಗೆಜ್ಜೆ–ಗಡಿಹಳ್ಳಿ
ಈರ ಬಸವಣ್ಣೋ ಬರುತಾನೆ

ಕಾಲೀಗೆ ಕಾಲಕಡಗ ಕೋಡಿಗೆ ಕೋಡಣಸು
ಗಲ್ಲು ಗಲ್ಲೆಂಬೋ ಹುಲಿಗೆಜ್ಜೆ–ಗಡಿಹಳ್ಳಿ
ಚನ್ನಬಸವಣ್ಣೋ ಬರುತಾನೆ

ಚನ್ನಬಸವಣ್ಣೋ ಬರುತಾನೆ ಅವರೀಗ
ಉಟಾವ ಅವರೇ ಮಾಡುತಾರೆ

ಹಡದವ್ವ ಕಟ್ಟೇದ ಹಾಲಾಗರದ ಬುತ್ತೀಯ
ಆಗ ಉಂಡೋರೆ ವಗುಳ್ಯಾರೆ–ಶಿವನೇಯ
ಕಾಮವ್ವನ ಕಯ್ಯಗುಳ ಅಡಿಗೇಯ

ಉಪ್ಪೀನ ಕಾಯೀಗೆ ತುಪ್ಪಾಗರ ಹೇಚಾಲೆ
ಮತ್ತೆ ಉಂಡೋರೆ ವಗುಳ್ಯಾರೆ–ಶಿವನೇಯ
ಕಾಮವ್ವನ ಕಯ್ಯಗುಳ ಅಡಿಗೇಯ

ಏಳೂರ ಮಾನ್ಯವ್‌ರೇ ಉಟಾವ ಮಾಡಿಕ್ಯಂಡು
ತಾಂಬೂಲ ಅವುರೇ ಹಾಕುತಾರೆ–ಅವರೀಗ
ಗುಡಿಗೂಡಿ ಅವುರೇ ಸೇರುತಾರೆ

ಜಲಕಲ ಮಲ್ಡೀ ವ್ಯಾಗೆ ದುುಮುುಕೀ ದಂಡಿಳುದಂಗೆ
ಏಳೂರ್ ಮಾನ್ಯವುರೇ ಇಳುದಾರೆ

ಸಟ್ಟೆ ಆನಾವೇರಿ ಹತ್ತು ಸಾವುರಗದ್ದೆ
ಗದ್ದೆಗು ಡಿರ್‍ಯೇವು ಹೊಡಿಸ್ಯಾರೆ

ರಾಯ ಆನಾವೇರಿ ಆರು ಸಾವುರ ಗದ್ದೆ
ಗದ್ದೆಗು ಡೀರ್‍ಯೇವು ಹೊಡಿಸ್ಯಾರೆ

ಗದ್ದ್ಯಾಗೆ ಇರುವೋದು ಯಾತಾರ ಮರನಪ್ಪ
ದ್ರಾಕ್ಷಿ ರುದ್ರಾಕ್ಷಿ ಗಜನಿಂಬೆ—ಮರದಡಿಯ
ದಂಡಾಬಿಟ್ಟಾನೆ ದಳವಾಯಿ

ಹಳ್ಳದಾಗಿರುವೋದು ಯಾತಾರ ಮರನಪ್ಪ
ಜಾತಿ ದಾಳಿಂಬೆ ಎಳಿಯಾಲು—ಮರದಡಿಯ
ದಂಡಾ ಬಿಟ್ಟಾನೆ ದಳವಾಯಿ

ದಂಡಾ ಬಿಟ್ಟಾನೆ ದಳವಾಯಿ ತಿಮ್ಮಣ
ಗದ್ದೆಗು ಡೀರ್‍ಯೇವು ಹೊಡಿಸ್ಯಾನೆ

ಸಟ್ಟೆ ಆನಾವೇರಿ ಹತ್ತು ಸಾವುರ ಗದ್ದೆ
ಕೊಯ್ಲೀಗೆ ಬಂದೇ ಐದಾವೆ

ರಾಯ ಆನಾವೇರಿ ಆರು ಸಾವುರ ಗದ್ದೆ
ಕೋಯ್ಲೀಗೆ ಬಂದೇ ಐದಾವೆ

ಸಟ್ಟೆ ಆನಾವೇರಿ ದೊಡ್ಡ ಬತ್ತದ ಗದ್ದೇಯ
ಅರಗಿಡುದು ಕೊಯ್ದು ಕುದುರೀಗಾನಾವೇರಿ
ಗಂಡಾದರೊಲ್ಟು ಬರಹೇಳು

ರಾಯ ಆನಾವೇರಿ ಸಣಬತ್ತದ ಗದ್ದೇಯ
ಒಂದಿಡುದು ಕೊಯ್ದು ಕುದುರೀಗಾನಾವೇರಿ
ದಿರನಾದರೊಲ್ಟು ಬರಹೇಳು

ಆನವೇರಿಯೋ ಸಣ ಬತ್ತದ ಗದ್ದೇಯ
ಒಂದಿಡುದೇ ಅವ್ರೆ ಕೊಯ್ದಾರೆ

ಹುಲ್ಲು ಹೊರಿಯಾ ಕೊಟ್ಟು ಪುಲ್ಲಗೋರಿ ಕೊಟ್ಟು
ಸಿದ್ಧಯು ಆಳ ಮಾಡಿ ಕಳುವ್ಯಾನೆ–ಅವನೀಗ
ದೊಡ್ಡುರು ದಂಡಿನಾಗೆ ಒಳಹೊಕ್ಕ

ಆಗದ ಹುಲ್ಲೀಗೆ ಹಣವಡ್ಡಿ ಹೇಳೀಕೊಂಡು
ದೊಡ್ಡುರು ದಂಡಿನಾಗೆ ಒಳಹೊಕ್ಕಿದ್ದಿ ರದಿಮ್ಮಣ್ಣ ನೋಡಿ
ಏನಂದೆ ಆಗೋ ನುಡುದಾನೆ

ಕಳ್ಳಾನ ಹಿಡುದರಿಗೆ ಕೊಳ್ಳ ಪದುಕಾ ಕೊಡುವೆ
ಹಳ್ಳಿ ಹಾಕುಸುವೆ ಹದಿನಾರಿರ ಕಾಮಯ್ಯ
ಕಳ್ಳಾನಿಡುದಂತ ಬಂಟರಿಗೆ

ಕಳ್ಳಾನಿಡುದಂತ ಬಂಟರಿಗೆ ಅಂತೇಳಿ
ಈರದಿಮ್ಮಣ್ಣೋ ನುಡುದಾನೆ

ಆಗಂದ ಮಾತು ಈರುಕಾಮಯ್ ಕೇಳಿ
ಕಳ್ಳಾನ ಹೋಗಿ ಹಿಡುದಾನೆ

ಈರುಕಾಮಯ್ಯೋ ಹಿಡುಕಂಡು ಬಂದಾನು
ಹುಲ್ಲಾನೆ ಹೋರಿಯೋ ಕಿತಗಂಡು

ಹುಲ್ಲಾನೆ ಕಿತಗಂಡು ಪುಲ್ಲಗೋರಿ ಕಿತಗಂಡು
ಪೀಚಂಡಿ ಹಗ್ಗೋ ಬಿಗುದಾರೆ—ಅವರೀಗ
ಸುಣ್ಣ ಕೆಮ್ಮಣ್ಣು ತರಿಸ್ಯಾರೆ

ಒಂದು ಕುಂಡಿಗೆ ಸುಣ್ಣ ಒಂದು ಕುಂಡಿಗೆ ಕೆಮ್ಮಣ್ಣು
ಸುಣ್ಣ ಕೆಮ್ಮಣ್ಣೋ ಬರುದಾರೆ

ನಿಂಗಾನ ಪಟ್ಟ್ಯೊಂದು ತಿಮ್ಮಾನ ಪಟ್ಟ್ಯೊಂದು
ಸುಣ್ಣ ಕೆಮ್ಮಣ್ಣೋ ಬರುದಾರೆ

ಗದ್ದ್ಯಾಗೆ ಬಿದ್ದಿದ್ದೋ ಹಳೆಮಾರ ತಕ್ಕೊಂಡು
ಚತ್ರೀಯ ಮಾಡಿ ನಿಲಿಸ್ಯಾರೆ

ಸತ್ತೊದವರ್ಗೆ ಹೊಟ್ಟ್ಯಾಗೆ ಹುಟ್ಟಿ ಬಂದ್ಯೋ ನಾವೀಗ
ಈಗುಟ್ಟಿ ಬಂದ ಮರಿಜಲುಮಾನಾವೇರಿ
ಗಂಡಾದರೊಲ್ಟು ಬರಿಹೇಳು

ತೀರೊಡರ್ವಿ ಹೊಟ್ಟ್ಯಾಗೆ ಈಗುಟ್ಟೆ ನಾವ್ ಬಂದ್ಯ್ಯೋ
ಈಗ್ ಬೆಳದೆ ಬಂದ್ಯ್ಯೋ ಮರಿಜಲುಮಾನಾವೇರಿ
ನ್ಯಾಯುಕು ಸಿದ್ದಾನ ಬರಿಹೇಳು

ನ್ಯಾಯುಕು ಸಿದ್ದಾನ ಬರಿಹೇಳು ಅಂತೇಳಿ
ಏಳೂರ ಮಾನ್ಯವ್‌ರೇ ನುಡುದಾರೆ

ಬಂದಂತ ಹುಡುಗ ವಾದಾನು ಸಿದ್ದಯ್ಯಗೆ
ಸಿದ್ದಯ್ಯಗೆ ದೂರು ಹೇಳುತಾನೆ

ಬಾಳೆ ಹಣ್ಣೇನಂಗೆ ಬಂದವ್ ಬಹುರೀಗಡ್ಡ
ಮುಂದಾಕೊಂದೊಂದೆ ಸಿರಿನ್ಯಾರೆ–ಶಿವನೇಯು
ಬಂದೊರೊರೆಲ್ಲಾ ಹುಡುಗಾರೆ

ಬಂದೊರೊರೆಲ್ಲಾ ಹುಡುಗಾರೆ ಸಿದ್ದಯ್ಯ
ಡಿರ್ಯೇವುದ ತುಂಬಾ ಮನಿಗ್ಯಾರೆ–ಸಿದ್ದಯ್ಯ
ಈಗು ನಿನ ಪಟ್ಟಣುಕೆ ಉಳವಿಲ್ಲ

ಚೆಡ್ಡಿ ಚಳ್ಳಗದೋನು ಚಿಕ್ಕನಾಮಾದೋನು
ಇಲತ್ತಿ ಬರುವ್ರೋ ಕೊನಿಮೀಸೆ–ಸಿದ್ದಯ್ಯ
ಅವನೊವ್‌ನಿಗೆ ಸಾಲ್ದಲ್ಲೋ ನಿನಪಟ್ಣ

ಕುದುರೆ ಕುಣುಸುತಾನೆ ಚದುರಂಗನಾಡುತಾನೆ
ಇಟ್ಟಂತ ನಾಮು ಬೆವ್ರುತಾವೆ–ಸಿದ್ದಯ್ಯ
ಒಬ್ಬಾನೈದಾನೆ ಬಹುದೀರ

ಒಬ್ಬಾನೈದಾನೆ ಬಹುದೀರ ಸಿದ್ದಯ್ಯ
ಅವನೊಬ್‌ನಿಗೆ ಸಾಲ್ದಲ್ಲೋ ನಿನಪಟ್ಣ

ಅಂಗಂದ ಮಾತು ಕೇಳ್ಯಾನೆ ಸಿದ್ದಯ್ಯ
ಉಪ್ಪೇಯು ಮೆಳಿಯು ಹುಡುಕ್ಯಾನೆ

ಮೊಟುಬಳ್ಳು ಚಿಕ್ಕಣ್ಣೋ ಆನವೇರಿ ಸಿದ್ದಯ್ಯ
ಉಪ್ಪೇ ಮೆಳಿ ವಳಗೆ ಉದಿಕ್ಯಂಡ್ರಾನಾವೇರಿ
ಜನುರೆಲ್ಲ ಆಗ ಹೋಗುತಾರೆ

ಹೆಂಡಾರ ಕರಕಂಡು ಮುಕ್ಕಾಳೆತ್ತೀಕೆಂಡು
ದಂಡೀಯು ಬೇಲಿ ಮುರಕಂಡಾನಾವೇರಿ
ವಕ್ಕಾಲೊಡವಡುದೇ ಹೋಗುತಾವೆ

ವಕ್ಕಾಲೊಡವಡುದೇ ಹೋಗಾದ ನೋಡ್ಯಾನೆ
ಈರ ದಿಮ್ಮಣ್ಣೋ ನುಡುದಾನೆ

ಕತ್ತಾಲ ಊರೀಗೆ ಕಳ್ಳರ್‌ನುಗ್ಗೀದಾಂಗೆ
ಬೋರೀ ಪಟ್ಟಣಕೆ ನುಗ್ಗಲೇನು–ನಿಂಗಣ್ಣ
ನುಗ್ಗಾನ ಬಾರೊ ಒಳವೀಕೆ

ಅಂಗಂದ ಮಾತು ನಿಂಗಣ್ಣ ಕೇಳ್ಯಾನೆ
ಕವುಡೆ ಆಟುಗುಳ ಆಡನ್ಬಾರೊ

ನೀನೆ ಹಿರಿಯಯ್ಯಾಗೊ ನಾನೇ ಸಿದ್ಧಯಾಗುತೀನಿ
ಸೋಲು ಗೆಲುವುಗಳ ಆಡನ್ಬಾರೋ

ಚನ್ನಾಂಗದ ಹಲಗೆಯೋ ಹಿಡುದಾನೆ ನಿಂಗಣ್ಣ
ಹನ್ನಲ್ಡಿ ಪಟ್ಟ ಅವಸೋತ–ತಾಳೀಕಟ್ಟಿ
ದೊಡ್ಡಪ್ಪನ ಬಲವೇ ನಮುಗೈತೆ

ಚನ್ನಾಂಗದ ಹಲಗೆಯೋ ಹಿಡುದಾನೆ ಮುಗಳೀ ತಿಮ್ಮಣ್ಣ
ಹನ್ನೆಲ್ಡೀ ಪಟ್ಟ ಅವಗೆದ್ದ–ತಾಳೀಕಟ್ಟಿ
ನಮ್ಮಪ್ಪಾನ ಬಲವೇ ನಮುಗೈತೆ

ನಮ್ಮಪ್ಪಾನ ಬಲವೇ ನಮುಗೈತೆ ನಿಂಗಣ್ಣ
ನುಗ್ಗಾನ ಬಾರೋ ಒಳವೀಕೆ

ದುಂದಿನೋನು ತಿಮ್ಮಣ್ಣೋ ಬಂದರ ನಿಲ್ಲೋನಲ್ಲ
ಹೆಬ್ಬಾಗಲಾಗ ವಡಿಸ್ಯಾನೆ

ಮುಗಳೀ ತಿಮ್ಮಣ್ಣೋ ಬಂದರ ನಿಲ್ಲೋನಲ್ಲ
ಕಂಡೀಯು ಆರ ವಡಿಸ್ಯಾರೆ

ಸುಟ್ಟ ಸುಕ್ಕರವಾರೊ ನೆಟ್ಟಗೆ ಮದ್ದ್ಯಾನುದಾಗೆ
ಹೆಬ್ಬಾಗಲವರೆ ವಡಿಸ್ಯಾರೆ–ಸಿಂಗಣ್ಣ
ನುಗ್ಗ್ಯಾರಾನ್ವೇರಿ ಒಳವೀಕೆ.

ಮಟ್ಟ ಮಂಗಳವಾರೋ ನೆಟ್ಟಗೆ ಮದ್ದ್ಯಾನುದಾಗೆ
ಹೆಬ್ಬಾಗಲವರೇ ಪಡಿಸ್ಯಾರೆ–ತಿಮ್ಮಣ್ಣ
ವಾದಾರಾನ್ವೇರಿ ಒಳವೀಕೆ

ಕತ್ತಿ ಕಿತ್ತಾರೆ ಕಲಘ್ಯಾಲೆ ಇಟ್ಟಾರು
ನೆತ್ತೀಯು ಜುಂಜೋ ಪದಿರ್‍ಯಾವೆ–ನಿಂಗಣ್ಣ
ಈಡ್ಯಾಡುತಾನೆ ತಲಿಗಾಳ

ಕಂಡೇವ ಕಿತ್ತಾನೆ ಬಂಡೆ ಪ್ಯಾಲಿಟ್ಟಾನೆ
ಮಂಡೇಯು ಜಂಜೋ ಪದಿರ್‍ಯಾವೆ–ತಿಮ್ಮಣ್ಣ
ಈಡ್ಯಾಡುತಾನೆ ತಲಿಗಾಳ

ಈಡ್ಯಾಡುತಾನೆ ತಲಿಗಾಳ ದಳವಾಯಿ
ಶಪ್ಪೆ ಕಡುದಂಗೆ ಕಡುದಾನೆ–ದಳವಾಯಿ
ಈಡ್ಯಾಡುತಾನೆ ತಲಿಗಾಳ

ಈಡ್ಯಾಡುತಾನೆ ತಲಿಗಾಳ ದಳವಾಯಿ
ನಮ್ಮಪ್ಪನ ಕೊಂದೋರೆ ಸಿಗಲಿಲ್ಲ–ಅಂತೇಳಿ
ಹುಡುಕ್ಯಾಡುತಾನೆ ರಣುದಾಗೆ

ನಮತಂದೆ ಕೊಂದೋರೆ ಸಿಗಲಿಲ್ಲ ಅಂತೇಳಿ
ನೋಡ್ಯಾಡುತಾನೆ ರಣುದಾಗಾನಾವೇರಿ
ಹತ್ತು ಸಾವೂರೆಣ್ಣೆ ಬರುತಾವೆ

ಹತ್ತು ಸಾವೂರೆಣ್ಣೆ ಮುತ್ತೀನಾರತಿ ಮಾಡಿ
ಮುತ್ತೀನಾರುತಿ ತರುತಾವೆ

ಆರು ಸಾವಾರು ಆನಾವೇರಿ ಹೆಣ್ಣು
ಹವಳದಾರುತಿಯೋ ತರುತಾರೆ–ಅವರೀಗ
ನಿಂಗಣುಗಾರುತಿಯಾ ಬೆಳಿಗ್ಯಾರೆ

ವಾಲಿ ಬಾಗ್ಯವಕಾಯೋ ಬಾಳೋರ ಮೊಮ್ಮಗುನೆ
ಮೇಲುದುರುಗಾದ ದಳವಾಯಿ–ನಿಂಗಣ್ಣ
ಮುತ್ತೈದೆತಾನ ಉಳಸಪ್ಪೋ

ಮುತ್ತೈದೆತಾನ ಉಳಿಸಿದ್ದುಂಟಾದರೆ
ಮುತ್ತಿನಾರುತಿಯ ಬೆಳಿಗ್ಯಾವೆ

ಕೊಪ್ಪ ಬಾಗ್ಯಾವ್ ಕಾಯೋ ಅಪ್ಪಂತರ ಮೊಮ್ಮಗುನೆ
ಚಿತ್ರದುರುಗಾದೋ ದಳವಾಯಿ–ತಿಮ್ಮಣ್ಣ
ಮುತ್ತೈದೆತಾನ ಉಳುಸಪ್ಪೋ

ಮುತ್ತೈದೆತಾನ ಉಳುಸಪ್ಪೋ ನಿಂಗಣ್ಣ
ನೀ ವಾದ ರಾಜ್ಜಾವೇ ಬೆಳಿಯಾಲಿ

ಅಂಗಂದ ಮಾತು ನಿಂಗಣ್ಣ ಕೇಳ್ಯಾನೆ
ಜಯಬೇರಿಯಾಗೋ ವಡಿಸ್ಯಾನೆ

ಜಯಬೇರಿ ವಡಿಸ್ಯಾನೆ ದರುಮ್ ಗಾಳೆ ಹಿಡಿಸ್ಯಾನೆ
ತಮ್ಮ ತಿಮ್ಮಣ್ಣೋ ಬರುತಾನೆ

ಎಡಗೈಗಲ್ಲಾ ಹಿಡಿದು ಬಲಗೈ ಕತ್ತಿ ಹಿಡ್ಡುದು
ಬಿಡು ನನ್ನ ತಮ್ಮಾ ನಿನ ಸಿಟ್ಟು–ನೀನೀಗ
ವಾದ ರಾಜ್ಜಾವೇ ಬೆಳಿಲಪ್ಪೊ

ಒಂದು ಕಯ್ಯಗು ಗಲ್ಲೋ ಒಂದು ಕಯ್ಯಗ್ ಕಲ್ಡೀವು
ಮತ್ತೊಂದೆ ಬುದ್ದಿ ಹೇಳುತಾನೆ

ವಾದ ರಾಜ್ಜಾವೇ ಬೆಳಿಲಪ್ಪೋ ದಳವಾಯಿ
ತಮ್ಮ ತಿಮ್ಮಣಗೆ ಹೇಳುತಾನೆ

ಆಚೆಕಾನಾವೇರಿ ಈಚಿಕೆ ಮಂಜಿನ ಗುಡ್ಡ
ಬಿಳಿಯ ಕೂಳೀಗೆ ಮನಸ್ವಾತ್ಯ–ನಿಂಗಣ್ಣ
ಕಲ್ಡೀವದ ಕಯ್ಯ ತಡುದೆಲ್ಲೋ

ಹಿಂದಾಕಾನಾವೇರಿ ಮುಂದಕೆ ಮಂಜಿನಗುಡ್ಡ
ಗಂಜಿ ಕೂಳೀಗೆ ಮನಸ್ವಾತ್ಯ–ನಿಂಗಣ್ಣ
ಕಾಳುಗದ ಕಯ್ಯ ತಡುದೆಲ್ಲೋ

ನಾರೇರ ಮಾತು ಲಾಲೀಸಿ ಕೇಳಿದೇನೊ
ನಾರ್ಯರ ಮಾತೀಗೆ ಬೆರಗಾದ್ಯ–ನಿಂಗಣ್ಣ
ದೊಡ್ಡಪ್ಪನ ಕೂಟಿ ಹೇಳತೀನಿ

ನಿಸ್ತ್ರೀರ ಮಾತು ಚಿತವಿಟ್ಟು ಕೇಳಿದೇನೊ
ನಿಸ್ತ್ರೀರ ಮಾತೀಗೆ ಬೆರಗಾದ್ಯ

ಹೆಂಡಾರಿದ್ದೋನು ನೀನು ಮಕ್ಕಾಳಿದ್ದೋನು ನೀನು
ನಾರ್‍ಯರ ಮಾತೀಗೆ ಬೆರಗಾದ್ಯ–ನಿಂಗಣ್ಣಾ
ನಾರ್‍ಯರ ಮ್ಯಾಲೆ ಗ್ಯಾನಬಿದ್ದ್ಯ

ನಾರ್‍ಯರ ಮ್ಯಾಲೆ ಗ್ಯಾನಬಿದ್ದ್ಯ ನಿಂಗಣ್ಣಾ
ನಮ್ಮಪ್ಪಾನ ಕೂಟೆ ಹೇಳತೀನಿ

ನಮ್ಮಪ್ಪನ ಕೊಂದೋರು ನನಗೀಗ ಸಿಗದಿದ್ದ್ರೆ
ಹೊಕ್ಕಲ್ಲಿ ನೀರಾ ತರಸೂವೆ

ಹೊಕ್ಕಲ್ಲಿ ನೀರಾ ತರಸಾದಿದ್ದರೆ ನಾನು
ಪುಂಡಾ ಜಂಗಮರೋ ಮಗನಲ್ಲಾ ನಾವೇರಿ ಸಿದ್ಧನ
ಹೆಂಡಿರ ಕೈಸೆರಿಯೊ ಹಿಡಸೂವೆ

ಸಟ್ಟೆ ಆನಾವೇರಿ ಹತ್ತು ಸಾವೂರೆಣ್ಣೂ
ನನ್ಹೊತ್ತೀಲಿ ನಾನು ನಿಲಸೂವೆ

ರಾಯ ಆನವೇರಿ ಆರು ಸಾವೂರೆಣ್ಣಿ
ವಾರೀಲಿ ನಾನು ನಿಲಸೂವೆ

ವಾರೀಲಿ ನಾನು ನಿಲಸೂವೆ ನಾನೀಗ
ಅವರೊಟ್ಟೆಗಳ ಪಿಂಡಾನ ತಗಸೂವೆ–ನಾನೀಗ
ನನ ಕತ್ತೀಯ ಮ್ಯಾಲೆ ನಿಲಸೂವೆ

ನನ ಕತ್ತೀಯ ಮ್ಯಾಲೆ ನಿಲಸಾದಿದ್ದರೆ ನಾನು
ಕೆಂಡಾಗಣ್ಣಿನೋರ ಮಗನಲ್ಲೋ–ಅಂತೇಳಿ
ದಂಡಿನ ದಳಪೋತಿ ನುಡುದಾನೆ

ಅಗಳಿಗಗಳಿಗಾಕಿ ಜಗಳ ಮಾನ್ಯವ್‌ರೇ ವಡುದಾಡಿ
ಮಗನಿಗಾಕಿಸಿದ ಕೈಪಂಜ

ಜಗಳ ಮಾನ್ಯವ್‌ರೇ ವಡುದಾಡಿ ನಿಂಗಣ್ಣಾ
ಹುಡುಕ್ಯಾಡುತಾನೆ ರಣುದಾಗೆ

ನಾವೇ ಸತ್ತೇವೆಂದು ಅಪ್ರೆ ಸತ್ತಾರೆಂದು
ನೋಡ್ಯಾಡುತಾನೆ ರಣುದಾಗೆ

ವಾದಾ ದಂಡಿನಾಗೆ ಒಂದಾಳು ಕಡಿಮಿಲ್ಲ
ಬಂದೋರೆ ಎಲ್ಲಾ ಸುಖವಾಗಿ_ಐದೇವೆ
ದೊಡ್ಡಪ್ಪನ ಬಲವೇ ನಮುಗೈತಿ

ದೊಡ್ಡಪ್ಪನ ಬಲವೇ ನಮುಗೈತಿ ಅಂತೇಳಿ
ಶಿವನೇ ನಿಂಗಣ್ಣ ನುಡುದಾನೆ

ನಮ್ಮಪ್ಪನ ಕೊಂದೋರು ಸಿಗಲಿಲ್ಲ ಅಂತೇಳಿ
ನೋಡ್ಯಾಡುತಾನೆ ದಳವಾಯಿ

ಹತ್ತೀಯ ಮರವೋ ಹತ್ಯಾನೆ ದಳವಾಯಿ
ಹತ್ತಿ ಕಡುದಾನೆ ಮೆಳಿಗಾಳೊ

ಆಲಾದ ಮರವೋ ಹಾರ್‍ಯಾನೆ ತಿಮ್ಮಣ್ಣ
ಹಾರಿ ಕಡುದಾನೆ ಮೆಳಿಗಾಳೊ_ತಿಮ್ಮಣ್ಣ
ಉಪ್ಪೇಯ ಮೆಳಿಯ ಕಡುದಾನೆ

ಉಪ್ಪೇಯ ಮೆಳಿಯೋ ಕಡುದು ಬಾಗಾಮಾಡಿ
ಆನವೇರಿ ಸಿದ್ದಯ್ಯೋ ಸಿಗುದಾನೆ

ನಮ ತಂದೆ ಕೊಂದೋರು ಸಿಕ್ಯಾನು ಅಂತೇಳಿ
ರಟ್ಟೆಗು ಕಯ್‌ಹಚ್ಚಿ ಯಳುದಾನಿರುದಿಮ್ಮಣ್ಣ
ಮೊಟುಬಳು ಚಿಕ್ಕಣುನ ತಲಿಗಾಳ

ಮೊಟುಬುಳು ಚಿಕ್ಕಣ್ಣನೋ ತಲಿಗಾಳ ತಕ್ಕೊಂಡು
ಆನವೇರಿ ಸಿದ್ದಯ್ನೋ ಹಿಡುದಾನೆ_ದಳವಾಯಿ
ಸಿದ್ದಯ್ನಂಡಾರೆ ಬರುತಾರೆ

ಆನವೇರಿ ಸಿದ್ದಯ್ಯಗೆ ಏಳುಜನ ಹೆಂಡಾರು
ಮುತ್ತೀನಾರುತೀಯ ತರುತಾರೆ

ವಾಲಿಬಾಗ್ಯವ ಕಾಯೋ ಬಾಳೋರ ಮೊಮ್ಮಗುನೆ
ಮುತ್ತೈದೆತಾನ ತಲಿಗಾಯೊ_ತಿಮ್ಮಣ್ಣ
ಮುತ್ತೀನಾರುತಿಯ ಬೆಳಗೇವು

ಕಪ್ಪು ಬಾಗ್ಯವ ಕಾಯೊ ಅಪ್ಪಂತರ ಮೊಮ್ಮಗುನೆ
ಮುತ್ತೈದೆತಾನ ತಲಿಗಾಯೊ

ಮುತ್ತೈದೆತಾನ ಉಳಿಸಿದ್ದುಂಟಾದಾರೆ
ಕಂಡ್ಯವುದ ಕಯ್ಗೆ ಜಯ ಜಯ–ಅಂತೇಳಿ
ಹವಳದಾರುತಿಯ ಬೆಳುಗ್ಯಾರೆ

ನಾನೆತ್ತೀದ ಕಯ್ಯೋ ಇಳುವದಿಲ್ಲಾ ಅಂದು
ಆನವೇರಿ ಸಿದ್ದಯ್ಗೆ ಹೇಳುತಾನೆ

ಆನವೇರಿ ಸಿದ್ದಯ್ನೋ ಪಟ್ಟಾದ ಆನೇಯ
ಆನೆ ಸೊಂಡಲವ ಅರಿವಡುದು–ತಿಮ್ಮಣ್ಣ
ನಮ್ಮೊಕ್ಕಾಲ ನಮಿಗೆ ಕಳಿಕೋಡೊ

ನಮ್ಮೊಕ್ಕಾಲ ನಿಮಗೆ ಕಳಿಕೊಡೋ ಸಿದ್ದಯ್ಯ
ನಮುಲೆಕ್ಕ ನಮಿಗೆ ಕೊಡುಬಾರೊ

ಬೀಸಿದ ಬತ್ತಲೆಕ್ಕ ಅರುದ ಕಾರುದ ಲೆಕ್ಕ
ಸಂಭಾರದ ಲೆಕ್ಕೋ ಕೊಡುಬಾರೊ

ಅರುದ ಕಾರುದ ಲೆಕ್ಕ ಅರುದ ಸಂಭಾರಲೆಕ್ಕ
ಮತ್ತೊಂದೆ ಲೆಕ್ಕೋ ಬರಬೇಕೆ

ಮೆಣಸು ಮೆಂತ್ಯವುದ ಲೆಕ್ಕ ನೀರುಳಿ ಬೆಳ್ಳುಳಿ ಲೆಕ್ಕ
ಇನ್ನೊಂದೆ ಲೆಕ್ಕ ಬರಬೇಕೆ

ಮಡಿವಾಳರ ಲೆಕ್ಕ ಕೊಡಬೇಕೆ ಸಿದ್ದಯ್ಯ
ಆಯಗಾರರ ಲೆಕ್ಕ ಕೊಡುಬಾರೊ

ನಮುಲೆಕ್ಕ ನಮಿಗೇನೆ ಕೊಟ್ಟಿಲ್ಲೊ ಸಿದ್ದಯ್ಯ
ನಮ್ಮಪ್ಪನ ಗಾಯ್ಕೇನ ಕೊಡತೀಯೊ

ನಮ್ಮಪ್ಪನ ಗಾಯ್ಕೇನ ಕೊಡತೀಯೊ ಅಂತೇಳಿ
ಬಕ್ಕಸದ ಮನಿಗೆ ಹೋಗುತಾರೆ

ಆನವೇರಿ ಸಿದ್ದಯ್ಯನ ಭಂಡಾರದಾ ಮನಿಯ
ಭಂಡಾರದ ಮನಿಯೋ ಹೋಗುತಾರೆ–ತಿಮ್ಮಣ್ಣ
ಬಗಸೆ ಬಂಡಾರ ಬಳಕಂಡ

ವಕ್ಕಾಲ ಕರಕಂಡು ಗೂಡೇ ಹೊರಸಿಕೊಂಡು
ವಕ್ಕಾಲ ಕರಕಂಡೇ ಹೊರುಟಾರೆ

ವಾದ ವಕ್ಕಲು ಕರಕಂಡು ತಿಮ್ಮಣ್ಣ
ಗೂಡೇ ಹೊರಿಸ್ಕೆಂಡೇ ಬರುತಾನೆ

ಮಕ್ಕಾಳೆತ್ತಿಕೊಂಡು ಗೂಡೇ ಹೊರಿಸಿಕ್ಯಂಡು
ಮಕ್ಕಳ ಕಯ್ಯೊಳಗೆ ಇಡಕಂಡು

ತಂದೆ ವಕ್ಕಾಲು ಕರಕಂಡು ತಿಮ್ಮಣ್ಣ
ಹಲಕೂರ ದನವ್ವೋ ಹೊಡಕಂಡು–ತಿಮ್ಮಣ್ಣ
ಕಂಡ್ಯೆವುದೊ ಕಯ್ಯೋ ತೊಳದಿಲ್ಲ

ಕಂಡ್ಯೆವುದೊ ಕಯ್ಯೋ ತೊಳದಿಲ್ಲ ತಿಮ್ಮಣ್ಣ
ಯಿಂದೇ ಗಂಬೀರೊ ಬರುತಾನೆ

ತಂದೆ ವಕ್ಕಾಲು ಕರಕಂಡು ನಿಂಗಣ್ಣ
ಆನವೇರಿ ಬಿಟ್ಟೋ ಬರುತಾನೆ

ಅವರಪ್ಪಾನೊಕ್ಕಾಲು ಕರಕಂಡು ನಿಂಗಣ್ಣ
ಆನವೇರಿ ಬಿಟ್ಟೋ ಬರುತಾರೆ–ಆಗಿನ್ನು
ಗಡಿಹಳ್ಳಿ ಬಸವಣ್ಣೋ ಬರುತಾನೆ

ಈರ ಬಸವಣ್ಣೋ ಬಂದಾನೆ ಆಗಿನ್ನು
ಕಲ ಕೆರದೇ ಡಿರಿಕೇ ಹೊಡುದಾನೆ–ನಿಂಗಣ್ಣ
ಕೋಡೀಲಿ ಕ್ವಾಟೆ ಕೆಡುವ್ಯಾನೆ

ಕೋಡೀಲಿ ಕ್ವಾಟೆ ಕೆಡುವ್ಯಾನೆ ಬಸವಣ್ಣ
ಏನಂದು ಆಗ ನುಡುದಾನೆ

ನಾನು ಕೆಡುವಿದ ಕ್ವಾಟೆ ನೀವೀಗ ಕಟ್ಟಿದುರೆ
ಯಾವತ್ತಿಗು ನ್ಯಾಯೋ ಅರಿಯಾದೆ

ಕೆಡವೀದ ಕ್ವಾಟೆಯಾ ಕಟ್ಟಿದುರೆ ನೀವೀಗ
ಎಂದೆಂದಿಗೂ ನ್ಯಾಯೊ ಅರಿಯಾದೆ

ನಮಿಗೂ ನಿಮಿಗೂ ಯಾಜ್ಜ ಅರಿಯಾದು ಅಂತೇಳಿ
ಈರ ಬಸವಣ್ಣೋ ನುಡುದಾನೆ

ಏಳೂರು ಮಕ್ಕಾಳೂ ವಕ್ಕಾಲ ಕರಕಂಡು
ತಂದೆ ತಳಮನಿಗೆ ಬರುತಾರೆ

ದಪ್ಪನ್ನ ದೋಣ ಬಡಿಸ್ಯಾರೆ ಸಿಂಗಣ್ಣ
ಚೋರ್ಯಾಡಿ ಕಾಳೆ ಹಿಡುದಾರೆ

ಕಾಳೇಯ ಸಬುದಾವೂ ಹಿರಿಯಯ್ಯ ಕೇಳ್ಯಾನು
ಏನಂದೆ ಆಗೋ ನುಡುದಾನೆ

ನನಕೆಪ್ಪೆ ವ್ಯಾಗಳ ಗಾಯೊ ಒಬ್ಬೊಬ್ಬ್‌ರ ಬಿಗಿ ಮಗುನೆ
ಕತ್ತೀಯ ತಾರೋ ನನ ಕೈಲಿ—ನನ ಮಗುನೆ
ಯಾವ್ ರಾಯರ ದಂಡೇ ಬರುತಾವೆ

ನನಕೆನ್ನೆ ವ್ಯಾಗಲ ಗಾಯೊ ಅಣ್ಣಣ್ಣ ಬಿಗಿ ಮಗುನೆ
ಕಂಡೇವ ತಾರೊ ನನ ಕೈಲಿ—ನನ ಮಗುನೆ
ಯಾವ ರಾಯರ ದಂಡೇ ಬರುತಾವೆ

ತಮ್ಮಾನ ಮಗ ಆಗ್ತಾನಂದು ಮಾಡಿದ್ದೆ
ದಾದೀಯ ಮಾಗೋ ಬರಲಿಲ್ಲ

ತಮ್ಮಾನ ಮಗ ಎಚ್ಚಯ್‌ಕಾಗ್ತಾನಂದು
ನಿಚ್ಚಯ್ಸಿಕೆಂಡಿದ್ದೆ ಮನುದಾಗೆ—ಶಿವನೇ ಸಿಂಗ
ಚಿನ್ನಾಟಕೆ ಬಂದ ನನಕೂಟ

ಚಿನ್ನಾಟಕೆ ಬಂದ ನನಕೂಟ ಅಂತೇಳಿ
ತಂದೆ ಹಿರಿದುಯ್ಯೊ ನುಡುದಾನೆ

ತಂದೆ ಹೇಳಿದ ಮಾತು ಕೇಳ್ಯಾನೆ ದಳವಾಯಿ
ಆಲಾದ ಮರವೂ ನೋಡುತಾನೆ

ಆಲಾದ ಮರವೊ ಆರ್ಯಾನೆ ದಳವಾಯಿ
ಹಾರಿ ನೋಡ್ಯಾನೆ ಪರಿಶೇಯು—ಬ್ಯಾಲನೂರ
ಮಾನ್ಯವ್‌ದೊಕ್ಕಾಲೆ ಬರುತೈತೆ

ಹತ್ತೀಯ ಮರವೋ ಹತ್ತಾನೆ ದಳವಾಯಿ
ಹತ್ತಿ ನೋಡ್ಯಾನೆ ಪರಿಶೇಯಾ—ಬ್ಯಾಲನೂರ
ಹೆಚ್ಚಿನೊಕ್ಕಾಲೆ ಬರುತೈತೆ

ಹೆಚ್ಚಿನೊಕ್ಕಾಲೆ ಬರುತೈತೆ ಸಿಂಗಣುನ
ಚಿನ್ನಗಾಳಿಗುಳೆ ಹಿಡುದಾವೆ

ದಪ್ಪನ್ನ ದೋಣ ಬಡಿಸ್ಯಾನೆ ತಿಮ್ಮಣ್ಣ
ತಂದೆ ಪಟ್ಟಣಕೆ ಬರುತಾರೆ

ಅಣ್ಣಾನೆ ತಿಮ್ಮಣ್ಣನ ದೋಣುಗಳು ಬಡುದಾವೆ
ಅಣ್ಣಾ ತಿಮ್ಮಣ್ಣ ಬರುತಾನೆ
ವಾದ ವಕ್ಕಾಲು ಕರಕಂಡೇ ನಮ್ಮಪ್ಪ
ಅಣ್ಣಾ ನಿಂಗಣ್ಣ ಬರುತಾನೆ

ಹತ್ತು ಬಿರುದಿಗಿನ್ನು ಮೇಲಾದ ಬಿರುದಪ್ಪ
ಮೇಲಾದೊಕ್ಕಾಲೆ ಬರುತೈತೆ

ಆರು ಬಿರುದಿಗಿನ್ನು ಹೆಚ್ಚೀನ ಬಿರುದಪ್ಪ
ಹೆಚ್ಚೀನೊಕ್ಕಾಲೆ ಬರುತೈತೆ

ವಕ್ಕಾಲ ಕರಕಂಡು ಗೂಡೆ ಹೊರಸಿಕ್ಯಂಡು
ಹಿರಿಯಯ್ಯನ ಮುಂದೆ ನಿಲಿಸ್ಯಾರೆ

ವಾದ ವಕ್ಕಾಲು ಕರಕಂಡು ನಿಂಗಣ್ಣ
ತಂದೇಯ ಮುಂದೆ ನಿಲಿಸ್ಯಾನೆ

ನಿಮ್ಮಪ್ಪ ಹಿರಿಯಯ್ಯಗೆ ಕೆಪ್ಪೆಮ್ಯಾಗುಳಗಾಯ
ಸುತ್ತುಲು ಮಾನ್ಯವ್ರ್ಗೆ ಚಿಗುರ್‌ಗಾಯ ಅಂಬೋಸುದ್ದಿ
ನಿಂಗಣ ನಿನ್ನ ಬಳಿಗೆ ಬರುಲಿಲವೆ

ನಿಮ ತಂದೆ ಹಿರಿಯಯ್ಯಗೆ ಕೆನ್ನೆ ಮ್ಯಾಗುಳಗಾಯ
ಏಳೂರ ಮಾನ್ಯವ್ರ್ಗೆ ಚಿಗುರ್‌ಗಾಯ ಅಂಬೋಸುದ್ದಿ
ತಿಮ್ಮಣ್ಣ ನಿನ ಬಳಿಗೆ ಬರಲಿಲವೆ

ತಿಮ್ಮಣ್ಣ ನಿನ್ನ ಬಳಿಗೆ ಬರಲಿಲವೆ ಅಂತೇಳಿ
ದೊಡ್ಡವ್ ಕಾಮಾಲೆ ನುಡುದಾಳೆ

ಈಗ ಬರುವ ವಾಲೆ ಮುಂದಾಗಿ ಬಂದಿದ್ದ್ರೆ
ಮಂದಿ ಬಲಗೊಂಡೆ ಬರತಿದ್ದೆ ದೊಡ್ಡವ್ವ
ಲಯವಾದ ಮ್ಯಾಲೆ ಕಳಬಹುದೆ

ಮುಂದೆ ನಿಂಗಣ್ಣ ನಿತ್ರಾನೆ ಹಿರಿಯಯ್ಯ
ಮಗುನ ತಬ್ಯಾಕಿ ಅವುಚಿ–ಮುದ್ದಾಡ್ಯಾನೆ
ಕಂದಯ್‌ಗೆ ಕೊಡುವೆ ಘನ ಬಿರುದು

ನನಾಡು ವುವ್ವಲೆ ಕೊಡುವೆ ತೂಗೊ ಮಂಚ ಕೊಡುವೆ
ಜೋಡೀನ ಪಡಿಯು ಅಳಸೂವೆ ನಿಂಗಣ್ಣ
ಜೋಡಲಗಿನ ವ್ಯಾಲೆ ಕುಣುಸೂವೆ

ಜೋಡಲಗಿನ ವ್ಯಾಲೆ ಕುಣುಸೂವೆ ನಿಂಗಣ್ಣ
ಮಾನ್ಯವ್‌ದೊಕ್ಕಾಲ ಕೊಡತೀನಿ

ದಂದೂರಂಬೋದ ಗಂಡು ಭೂಮಿ ಕೊಡುವೆ
ಹಿಂಡೀನ ಕುರಿಯು ಹೊಡಕೊಡುವೆ–ನಿಂಗಣ್ಣ
ಮಾನ್ಯವ್‌ದೊಕ್ಕಾಲ ಕೊಡುತೀನಿ

ಮಾನ್ಯವ್‌ದೊಕ್ಕಾಲ ಕೊಡುತೀನಿ ಅಂತೇಳಿ
ತಂದೆ ಹಿರಿಯಯ್ಯ ನುಡುದಾನೆ

ಮಗನು ತಿಮ್ಮಣ್ಣನೋ ಮುದ್ದಾಡಿ ಹಿರಿಯೇಶ
ಮತ್ತೇನ ಅವರು ಕೊಡುತಾರೆ

ನಾನಾಡೋ ವುವ್ವಲೆ ಕೊಡುವೆ ಏರೊ ಮಂಚ ಕೊಡುವೆ
ಜತ್ತೀನ ಪಡಿಯು ಅಳಸೂವೆ–ತಿಮ್ಮಣ್ಣ
ಕಟ್ಟಲಗಿನ ವ್ಯಾಲೆ ಕುಣಿಸೂವೆ

ಕಟ್ಟಲಗಿನ ವ್ಯಾಲೆ ಕುಣಿಸೂವೆ ತಿಮ್ಮಣ್ಣ
ಮಾನ್ಯೇವಾಕುಸುವೆ ಮಗನೀಗೆ

ನೀನಾಡೋ ವುವ್ವಲೆ ವಲ್ಲೆ ತೂಗೊ ಮಂಚ ವಲ್ಲೆ
ಜೋಡೀನ ಪಡಿಯೋ ನಾನೊಲ್ಲೆ–ದೊಡ್ಡಪ್ಪ
ಜೋಡಲಗಿನ ವ್ಯಾಲೆ ಕುಣಿವಲ್ಲೆ

ಜೋಡಲಗಿನ ವ್ಯಾಲೆ ಕುಣಿವಲ್ಲೆ ಬ್ಯಾಲನೂರ
ಅದರಗು ನನ್ನೆಸುರ ಕರಸಪ್ಪ

ನೀತೂಗೋ ವುವ್ವಲೆ ವಲ್ಲೆ ಏರೊ ಮಂಚವಲ್ಲೆ
ಜೋಡೀನ ಪಡಿಯು ನಾವಲ್ಲೆ–ನಮ್ಮಪ್ಪ
ಕಟ್ಟಲಗಿನ ವ್ಯಾಲೆ ಕುಣಿವಲ್ಲೆ

ಕಟ್ಟಲಗಿನ ವ್ಯಾಲೆ ಕುಣಿವಲ್ಲೆ ನಮ್ಮಪ್ಪ
ಮೊದಲುಟ್ಟಿದೆಸುರ ಕರಸಪ್ಪ

ಹತ್ತು ಬಿರುದಿಗಿನ್ನು ಹೆಚ್ಚೀನೆ ಬಿರುದೈತೆ
ಹೆಚ್ಚೀನೊಕ್ಕಾಲೆ ನಿನಗೈತೆ–ಬ್ಯಾಲನೂರ
ಗಂಡೇಳೊ ಹೆಸರೂ ಕರಸಪ್ಪೋ

ಆರು ಬಿರುದಿಗಿನ್ನು ಮೇಲಾದ ಬಿರುದೈತೆ
ಮೇಲಾದೊಕ್ಕಾಲೆ ನಿನಗೈತೆ–ಬ್ಯಾಲನೂರ
ಹೆಣ್ಣೇಳೊ ಹೆಸರೊ ಕರಸಪ್ಪೋ

ಗಂಡು ಹುಟ್ಟಿದರೆ ನಿಂಗ ಹೆಣ್ಣು ಹುಟ್ಟರೆ ತಿಮ್ಮಿ
ಮೊದಲುಟ್ಟಿದೆಸುರ ಕರಸಪ್ಪೊ

ಶಿವನೇಯು ನಿಂಗಣ್ಣೋ ಮುಗಳೀಯು ತಿಮ್ಮಣ್ಣೋ
ಮುಂದೇಳೊ ಹೆಸರ ಕರಿಸ್ಯಾರೆ

ಬೇಲಿಮ್ಯಾಗುಳುಪ್ಪು ಬೆಳ್ಳಗಿದ್ದಾರೇನೇ
ತೆಳ್ಳಗಿದ್ದೋನೆ ಬಲುಬಂಟ–ತಿಮ್ಮಣ್ಣ
ಗಡಿನಾಡ ಯಾಜ್ಜ ಗೆದ್ದು ಬಂದ

ಗಡಿನಾಡ ಯೊಜ್ಜ ಗೆದು ಬಂದ ಅಂತೇಳಿ
ದೊಡ್ಡವ್ವ ಕಾಮಾಲೆ ನುಡಿದಾಳೆ

ಬಂದ ಮಕ್ಕಳಿಗೆ ಶರಣು ಸಂಪತ್ತಾಗಿ
ವಾದ ವಕ್ಕಾಲು ಕರತಂದ್ರು–ಅಂತೇಳಿ
ಹಿರಿಯಯ್ಯ ಆಗೊ ಹೊರುಟಾನೆ

ಮನೆಬಾಗಿ ದಿಬ್ಬಾವೋ ಬಿಟ್ಟಾನೆ ಹಿರಿಯಯ್ಯೊ
ತಂದೆ ಬೀರೇಶೋ ಹೊರಟಾನೆ

ವಕ್ಕಾಲ ಕರಕಂಡು ಮಕ್ಕಳ ಕರಕಂಡು
ತಳಮನಿಗೆ ಅವ್ರೆ ಬರುತಾರೆ

ಏಳೂರು ಮಕ್ಕಳು ನೊಂದಾರು ಅಂದೇಳಿ
ತಂದ್ಯೊಂದ ಮಾತ ನುಡುದಾನೆ

ಹಿಗ್ಗಬ್ಯಾಡೊ ಕುಗ್ಗಬ್ಯಾಡೊ ಕುಗ್ರಾಮ ಪಡಬ್ಯಾಡೊ
ಇದ್ದ ಮಟ್ಟೀಗೆ ಇರಹೋಗೊ–ಬ್ಯಾಲನ ಕುರುಬ
ಒಂದೊಕ್ಕಲಾಗಿ ಬದುಕೋಗೊ

ಒಂದೊಕ್ಕಲಾಗಿ ಬದುಕೋಗೊ ಅಂತೇಳಿ
ತಂದೆ ಬೀರೇಶ ನುಡುದಾನೆ

ಮಕ್ಕಾಳ ಕರಕಂಡು ತಳವುನಿಗೆ ಬಂದಾರು
ಅಲ್ಲೊಂದು ರಾತ್ರೆ ಉಳುದಾರೆ

ಬಂದ ಮಕ್ಕಳಿಗೆ ಯಡಿಯ ಬೀಡಲು ಮಾಡಿ
ವುಡುಗರುಚ್ಚಾಯ ಕೊಡುತಾರೆ

ಬಂದ ಮಕ್ಕಳಿಗೆ ಶರಣು ಸಂಪತ್ತಾಗಿ
ಮಕ್ಕಳ ಕಳುವಾಕೆ ಹೊರಟಾರೆ

ಆರು ತಿಂಗಳು ನಿದ್ರೆ ಆರು ತಿಂಗಾಳೆಚ್ಚರ
ವನಮಲ್ಲಿ ದೊರಿಗೆ ಎಚ್ಚರಾಯ್ತು–ಮಲ್ಡೆಪ್ಪ
ಏನಂದೆ ಆಗ ಕೇಳುತಾನೆ

ಕರಿ ಎಲಿಯ ಕಾಮ ಬಾರೋ ನಿಂಗಣ್ಣ
ಎಳಿಯ ಹೊಂಬಾಳೆ ಬಾರೋ

ಸಕ್ಕೂರ ಮೂಡಿ ಹತ್ತು ತಾಸಾದಾವೊ
ಪುತ್ರ ನಿಂಗಣುನ ಸುಳವಿಲ್ಲ–ಕಾಮಾಲೆ
ಯಾವ ನಾಡಿಗೆ ಮಗನ ಕಳಿಕೊಟ್ಟೆ

ಸಕ್ಕೂರ ಮೂಡಿ ಆರು ತಾಸಾದಾವು
ಬಾಲಾ ನಿಂಗಣುನ ಸುಳವಿಲ್ಲ–ಕಾಮಾಲೆ
ಯಾವ ನಾಡಿಗು ಮಗನ ಕಳಿಕೊಟ್ಟೆ

ಕಣಿವೆ ಕೆಳಗ್ಲಿಂದೊ ದೊಡ್ಡೋರುತ್ತರ ಬಂದು
ನಿಲ್ಲುದಲೆ ವಾದ ನಿನ ಮಗ

ತಾಳೀಕಟ್ಟೆಂದೊ ತೂರ್ಯಾಡುತ ಬಂದಾ ವಾಲೇಗೆ
ಕೇಳುದುಲೆ ವಾದ ನಿನ ಮಗ

ಕತ್ತಿ ಹಿಡಿಯಲರಿಯೊ ಕ್ವಾಲ್ಡೆ ತಿರುವುಲರಿಯೊ
ಕಾಳುಗದ ಕಯ್ಯೊ ಮೊದಲರಿಯ–ನಮ್ಮಣ್ಣ
ಅರಿಯಾದ ಮಗನ ಕರಸ್ಬೆಹುದೆ

ಅಣ್ಣಾನಾದಾರೆ ನಾಳೆ ನೋಡಿಕೆಣುವೆ
ಅರಿಯಾದ ಮಗನ ಕರಸ್ಬವುದೆ_ನಮ್ಮಣ್ಣ
ಗಡಿನಾಡ್ಯಾಜ್ಞಾಕೆ ಕಳಬಹುದೇ

ಹಾಲುಃಬಾನಾನಿಟ್ಟು ಬಾಲೈಯ್ಯನ ಸಾಕಿದ್ದೆ
ಬಾ ಇಲ್ಲೀಗೆ ಎರವಾದ್ಯೋ_ತಾಳೀಕಟ್ಟೆ
ಮಾಂಾಯಗೋಲ ಹಿಡಕೊಟ್ಟೆ
ತುಪ್ಪಾಬಾನಾನಿಟ್ಟು ಪುತ್ರಯ್ಯನ ಸಾಕಿದ್ದೆ
ಪುತ್ರ ಇಲ್ಲೀಗೆ ಎರವಾದ_ತಾಳೀಕಟ್ಟೆ
ಬೀರೇಶಗೋಲ ಹಿಡಕೊಟ್ಟೆ

ಬೀರೇಶಗೋಲ ಹಿಡಕೊಟ್ಟೆ ಅಂತೇಳಿ
ಹಡದವ್ವಾಕಾಮಾಲೆ ಅಳುತಾಳೆ

ಕಗ್ಗಾಕೆ ಕಲಿಬೀರೊ ಲೆಗ್ಗೀಗೆ ಸುರತಾಳ
ಒಬು ತಾಯಿಗೊಬ್ಬೊ ಮಗಾನು_ಸಿಂಗಣ್ಣಾನು
ಗಡಿನಾಡ್ಯಾಜ್ಞಾಕೆ ಹೋಗಿದಾನೆ

ಸುಟ್ಟೆ ಸುಕ್ಕರವಾರೊ ಹುಟಿದೆಲ್ಲ ಶಿವನೇ ನಿಂಗ
ಪಟ್ಣಾಣವೆಲ್ಲೊ ಹೊನುವಕ್ಕಲೆ-ಅಂತೇಳಿ
ತಂದೆ ಮಲ್ಡಪ್ಪ ಅಳುತಾನೆ
ಗಡಿನಾಡಿಗೆ ಮಗುನ ಕಳಬಹುದೆ ಅಂತೇಳಿ
ತಂದೆ ಮಲ್ಡಪ್ಪ ನುಡುದಾನೆ

ಬತ್ತಿದ್‌ಬಾಯ್ ತೊಳಿಲಿಲ್ಲೊ ಬೆತ್ತುಲ ಕುದುರೆಯೇರಿ
ದುಂದಿನೋನು ಮಲ್ಡಯ್ಯ ಹೊರುಟಾನೆ

ದುಂದಿನೋನು ಮಲ್ಡಯ್ಯ ಎಲ್ಲೀಗೆ ಹೊರುಟಾನೆ
ರಾಯರ ಪಾದಾಕೆ ಬರುತಾನೆ

ಅಣ್ಣಾನೆ ಬೀರೇಶೊ ಮಕ್ಕಾಳ ಕಳುವ್ಯಾನು
ಏಳೂರು ಮಕ್ಕಾಳು ಕಳುವ್ಯಾನೆ_ಬೀರೇಶ
ಮಕ್ಕಳ ನೋಡಿಕ್ಯಂಶೋ ನಿಂತುದಾನೆ
ಆಚೆಗೆ ಮಕ್ಕಳ ಕಳುವಿ ಈಚೆಗೆ ತಮ್ಮನ ಬೇಟಿ
ಅಣ್ಣಾ ತಮ್ಮುರಿಗೆ ಸಮಬೇಟಿ_ಆದಾವೊ
ತಮ್ಮ ಮಲ್ಡಯ್ಯೋ ಕೇಳುತಾನೆ

ಅಣ್ಣಾನಾದಾರೆ ನನ್ನಾ ಕರಸಾಕಿಲ್ಲಾವೆ
ಅರಿಯಾದ ಮಗನೊ ಕರಸ್ಬಹುದೇ—ಅಂತೇಳಿ
ತಮ್ಮ ಮಲ್ಡೆಪ್ಪ ನುಡುದಾನೆ

ಬಂದಂತ ಯಾಜ್ಞಾವೋ ಯಾರಿಂದಂತೋರಿಲ್ಲ
ಕುಂಜುರುದ ಅಳ್ಳಿ ನನಕಂದ—ನಿಂಗಣ್ಣ
ಗಡಿನಾಡ್ಯ ಯಾಜ್ಞಾ ಗೆದ್ದೆ ಬಂದ

ಗಡಿನಾಡ ಯಾಜ್ಞೋ ಗೆದು ಬಂದ ನನಮಗ
ಪರನಾಡ ತೋಳ ತಿರಿವ್ ಬಂದ

ಅಣ್ಣ ತಮ್ಮಾರಿಗೆ ಶರಣು ಸಂಪತ್ತಾಗಿ
ತಮ್ಮನ ಕರಕಂಡೆ ಬರುತಾನೆ—ಬೀರೇಶ
ತಳಮನಿಗೆ ಆಲ್ಲಿ ಬರುತಾನೆ

ಬಂದ ತಮ್ಮಾಗೆ ಶರಣು ಸಂಪತ್ತಾಗಿ
ಬೇಗಾನೆ ಅಡುಗೆ ಮಾಡುತಾರೆ—ಅವರೀಗ
ಪುಡುಗರುಚ್ಚಾಯು ಕೊಡುತಾರೆ

ಏಳೂರ ಮಾನ್ಯವ್ ರೇ ಶಿವುನೇ ಪಟ್ಟಣುದಾಗೆ
ಅಲ್ಲೊಂದ ರಾತ್ರೆ ಉಳುದಾರೆ—ಮಲ್ಡೆಪ್ಪ
ತಳಮನಿಗೆ ಆಗೊ ಬರುತಾನೆ

ತಳಮನಿಗೆ ಆಗೊ ಬಂದಾನೆ ಮಲ್ಡೆಪ್ಪ
ನಿಂಗಣ್ಣೊ ಆಗೊ ಹೊರುಟಾನೆ

ಏಳೂರ ತಮ್ಮಗಳು ಕಳುವಾಕೆ ನಿಂಗಣ್ಣ
ದೊಡ್ಡವ್ ಕಾಮಾಲೆ ಹೊರುಟಾಳೆ

ಅರುಸಾನೆ ನಿಂಗಣ್ಣ ಆನೆಯೇರಿದುನಲ್ಲೆ
ಚೌಕೂಳಿ ಕಿವಿಯು ದಳವಾಯಿ—ಏರಿದುನಲ್ಲೆ
ನಡುಸಣ್ಣನೇಯು ಮರಿಕುದುರೆ

ನಡುಸಣ್ಣನೇಯು ಮರಿಕುದುರೆಯೇರಿದುನಲ್ಲೆ
ಏಳೂರು ತಮ್ಮಗಳ ಕಳುವಾಕೆ—ಹೊರಟಾನೆ
ದೊಡ್ಡವ್ವ ಕಾಮಾಲೆ ನುಡುದಾಳೆ

ಕನಕ ಕಸ್ತೂರಿ ಮನಕೋಪ ಹಿಡಿಜೇಜಿ
ದಳಕೆ ಸುಂಗಾರಿ ದಳವಾಯಿ–ನೀನಿಲ್ಲುದ ಮ್ಯಾಲೆ
ಕೆಣುಕೋರ್‍ಯ್ಯಾರಪ್ಪೋ ಗಡಿಜಗಳ

ಕೆಣುಕೋರ್‍ಯ್ಯಾರಪ್ಪೋ ಗಡಿಜಗಳ ಅಂತೇಳಿ
ಶಿವುನೇ ಕಾಮುವ್ವ ನುಡುದಾಳೆ
ಗೋಪಿಕೆರೆಯಯ್ಯೋ ಸಾಸ ಬಲ್ಲಿದುನಲ್ಲೆ
ಅವ್ರ ತಳಮನಿಗೆ ಅವ್ರೇ ಹೋಗುತಾರೆ

ಈರ ಕಾಮಯ್ಯೋ ಮಾತೀಲಿ ಸಮರಂತ
ಅವ್ರ ಸ್ಥಳ ಮನಿಗೆ ಅವುರೇ ಹೋಗುತಾರೆ
ಈರ ಬಸವಣ್ಣೋ ಮಾತೀಲಿ ಸಮರಂತ
ಅವ್ರ ತಳಮನಿಗೆ ಅವುರೇ ಹೋಗುತಾರೆ

ಕಂಸಾಗರದಯ್ಯೊ ಮಾತೀಲಿ ಸಮರಂತ
ಅವ್ರ ತಳಮನಿಗೆ ಅವ್ರೇ ಹೋದಾರು


ಎರೆನಾಡ ಸೀಮೆಗೆ ಗುರಿಯಿಟ್ಟ ಮುಗಳೀಯ
ಎರೆನಾಡಗೊಬ್ಬ ದೊರಿಮಗ–ಈರದಿಮ್ಮಣ್ಣ
ಪರನಾಡ ತೋಳ ತಿರುವಿ ಬಂದ

ಗಡಿನಾಡ ಯಾಜ್ಞಾ ಗೆದು ಬಂದ ತಿಮ್ಮಣ್ಣ
ಅವ್ರ ತಳಮನಿಗೆ ಅವ್ರೆ ಹೋದಾರೆ
ಏಳೂರ ಮಕ್ಕಳ ಕಳುಯೀದ ಕಾಮುವ್ವ
ಶಿವುನೇ ಪಟ್ಟಣಕೆ ಬರುತಾಳೆ

ಇಲ್ಲೀಗೆ ಹರಹರಾ
ಇಲ್ಲೀಗೆ ಶಿವಶಿವಾ
ಇಲ್ಲೀಗೆ ಈಸೊಂದು ಕಥೆಯು ಮುಗುದಾವೆ
ತಾಳೀಕಟ್ಟೆ ಹಿರಿಯಯ್ಯಾನ ಕಾಳುಗವೇ ಮುಗುದಾವು
ನಮ್ಮ ಹಾಲುಮತದ ಜನಕೆ ಸಿದ್ದ ಬೀರೇಶ
ಬೀರಲಿಂಗನದ್ದು ಕಥೆಗಳನ್ನು ನಡೆಸಿದೆವು
ಬೀರೇಶನ ಕಥೆಯೋ ಮುಗುದಾವೆ

# ಅನುಬಂಧಗಳು

# ಕಥಾ ಪ್ರದೇಶ



## ಕೆಲವು ಸ್ಥಳಗಳು

೧. **ಆನವೇರಿ ದಿಬ್ಬ**—ಚನ್ನಗಿರಿ ತಾಲ್ಲೂಕಿಗೆ ಸೇರಿದ ಒಂದು ಗುಡ್ಡ.

೨. **ಹೊನ್ನೆಬಾಗಿ ದಿಬ್ಬ**—ತಾಳೀಕಟ್ಟೆ ಮತ್ತು ಆನವೇರಿ ಮಧ್ಯೆ ಇರುವ ಒಂದು ಗುಡ್ಡ.

೩. **ರಾಯರ ಪಾದ**—ದಾಸರಹಟ್ಟಿ ಬಳಿ ಇದೆ.

೪. **ಬಾಲನ ಕಣಿವೆ**—ಬಾಳೇರಿ ಕಣಿವೆ ಹರಳಹಳ್ಳಿ ಮತ್ತು ಗೊಂದಿಹೊಸಹಳ್ಳಿ ಹಿಂಭಾಗ ಇದೆ.

೫. **ಈರಾಪುರದ ಕಾವಲು**—ಶಿವನಿ ಮತ್ತು ಶಿವನಿ ರೈಲ್ವೇ ಸ್ಟೇಷನ್ ನಡುವೆ ಇದೆ.

೬. **ವಡನಾಳ ಕಣಿವೆ**—ತಾಳೀಕಟ್ಟೆ ಆನವೇರಿ ನಡುವೆ ಇದೆ.

## ಕಥೆ ನಡೆಯುವ ಜಿಲ್ಲೆಗಳು

೧. ಚಿತ್ರದುರ್ಗ

೨. ಶಿವಮೊಗ್ಗ

೩. ಚಿಕ್ಕಮಗಳೂರು

## ತಾಳೀಕಟ್ಟೆಯಲ್ಲಿರುವ ಕುರುಬರ ಒಕ್ಕಲುಗಳು

೧. ಬ್ಯಾಲನ ಕುರುಬರು

೨. ಸಾವಂತನರು

೩. ಮನ್ನೆಗೊಲದವರು (ಅಮ್ಮಳ್ಳಿ)

೪. ಸಂಗೆಗೊಲ

೫. ಹಾಲನ ಕುರುಬರು

i) ಗುಮ್ಮನರು—ಗುಮ್ಮನನ್ನು ಹೊಡೆದು ತಮ್ಮ ಗೂಡೆ ಇಳಿಸಿದ್ದರಂತೆ

ii) ತರ್ಕನರು—ತರಗನ್ನು ಗುಡಿಸಿ ಗೂಡೆ ಇಳಿಸಿದ್ದರಂತೆ.

೬. ಕಪ್ಪಿನ ಕುರುಬರು (ಬೆಳ್ಳೆಗೊಲ)

೭. ಬಲ್ಲಾಳ ಕುರುಬರು

೮. ಗಂಡುಗೊಲದವರು

೯. ಕ್ವಾಟ್ಲೆ ಕುರುಬರು (ಕ್ವಾಟೆ ಮೇಲಿದ್ದವರು)
೧೦. ಹುಲೇನ ಕುರುಬರು (ಹುಲಿಬೋನಿನಲ್ಲಿದ್ದ ಮಗುವನ್ನು ಕರೆದುಕೊಂಡು ಬಂದವರು.)
೧೧. ತರೆನಾಗರ ಕುರುಬರು

ಈ ಮುಂತಾದ ಕುಲಗಳನ್ನು ಗಮನಿಸಿದರೆ ಬಹುವಾಗಿ ಯುದ್ಧ ಇಲ್ಲವೆ ಯೋಧರ ಜೀವನವನ್ನು ಬಿಂಬಿಸುತ್ತವೆ. ತಮ್ಮ ವೀರತೆಯನ್ನು ಬಹುಬಗೆಯಲ್ಲಿ ಪ್ರದರ್ಶಿಸುವಂತೆ ಇವು ಕಾಣುತ್ತವೆ.

## ಊರುಗಳ ಹೆಸರು

೧. ತಾಳೀಕಟ್ಟೆ
೨. ಆನವೇರಿ
೩. ದುಮ್ಮಿ
೪. ಬನಿಹಟ್ಟಿ
೫. ಪಾಡಿಗಟ್ಟೆ
೬. ಬಂಕನ ಕಟ್ಟೆ
೭. ಶಿವುನೆ
೮. ಅನ್ನೇನಳ್ಳಿ
೯. ಗಡೀಹಳ್ಳಿ
೧೦. ತಡುಗ
೧೧. ಮುಗಳಿ
೧೨. ದಂದೂರು
೧೩. ಹೊನ್ನೇ ಬಾಗಿ
೧೪. ಈರಾಪುರ
೧೫. ವಡುನಾಳು
೧೬. ಬ್ಯಾಲನೂರು
೧೭. ಸಿಂಗೇನಹಳ್ಳಿ
೧೮. ತುಪ್ಪದಹಳ್ಳಿ (ತುಪ್ಪಟದ ಹಳ್ಳಿ)
೧೯. ಎಳಿಯಾಲು
೨೦. ಆಲೂರು
೨೧. ಬೇಲೂರು

## ಇಂದಿಗೂ ಇರುವ ಕೆಲವು ಆಚರಣೆಗಳು

ಈ ಕಾಳಗದ ಪದದಲ್ಲಿ ಬರುವ ಕೆಲವು ಪ್ರಸಂಗಗಳು ಇಲ್ಲವೇ ಅವುಗಳಿಂದಾದ ಪರಿಣಾಮಗಳಲ್ಲಿ ಕೆಲವು ಇಂದಿಗೂ ಆಚರಣೆಗಳಾಗಿ ಉಳಿದುಬಂದಿರುವ ಅಂಶಗಳು ಗಮನಾರ್ಹವಾದವುಗಳಾಗಿವೆ.

೧. ದುಮ್ಮಿ ಮತ್ತು ತಾಳೀಕಟ್ಟೆಗಳಲ್ಲಿ ಇಂದಿಗೂ ಹೆಣ್ಣು ಕೊಡುವುದಾಗಲಿ ತರುವುದಾಗಲಿ ಇಲ್ಲ. ಮೊದಲು ಮನೆಗಳಿಗೆ ಪ್ರವೇಶವೂ ಇರಲಿಲ್ಲ. ಇತ್ತೀಚೆಗೆ ಊಟೋಪಚಾರಗಳಿವೆ. ಆದರೆ ಸಂಬಂಧ ಇಲ್ಲ.

೨. ನವಣೆ ಹೊಲದಲ್ಲಿ ಜಗಳ ಮಾಡಿದ್ದ ಕಾರಣ ದುಮ್ಮಿಯ ಜನಕ್ಕೆ ನವಣೆ ಒಂದು ನಿಶಿದ್ಧ ದವಸವಾಗಿದೆ.

೩. ಬ್ಯಾಲನ ಕುರುಬರಲ್ಲಿ ಇಂದಿಗೂ ಹಿರಿಯ ಮಗ ಅಥವಾ ಮಗಳಿಗೆ ಹನುಮ, ಹನುಮಿ ಎಂದು ನಾಮಕರಣ ಮಾಡುತ್ತಾರೆ.

## ಪದಗಳ ಅರ್ಥ

ಡೀರ್‍ಯೇವ–ಡೇರೆ, ಶಿಬಿರ
ಸಾವಾರ–ಸಾವಿರದ
ಸಮರಂತ–ಸಮರ್ಥ
ಕೂರಿ–ಕುರಿ
ಕಳೈ–ಸುತ್ತಲೂ ಕಳ್ಳಿಯ ಬೇಲಿಮಾಡಿ ಕುರಿ ಕೂಡುವ ರೊಪ್ಪ, ದೊಡ್ಡಿ
ಪರಚಂಡ–ಪ್ರಚಂಡ
ಬಿಳಿಯ ಕೂಳು–ಅನ್ನ
ಲಾಬುತೆ–ಲಾಭಕ್ಕೆ
ಹೊತುದೆಪಿ–ಹೊತ್ತು ತಪ್ಪಿ
ನಿಸ್ತ್ರೇ–ಸ್ತ್ರೀ, ನಾರಿ
ಅಧಿಪೋತಿ–ಅಧಿಪತಿ
ಬರಗಿ–ಒಂದು ಬಗೆಯ ಧಾನ್ಯ
ಕೂಳೆ–ಧಾನ್ಯ ಕುಯ್ದ ಮೇಲೆ ಕಾಲಿಗೆ ಚುಚ್ಚುವ ಬುಡದ ಭಾಗ
ಬರತವು–ಬಾರೋತವ್ಮ
ಒಕ್ಕಾಳ–ಒಂದು + ಕೊಳಗ= ಒಕ್ಕೊಳಗ > ಒಕ್ಕಾಳ
ನಾಗಾಳ–ನಾಲ್ಕು + ಕೊಳಗ– ನಾಗೊಳಗ–ನಾಗಾಳ
ಅಪತೋಳ–ಔತಣ
ಇಕ್ಕಾಳ–ಎರಡು + ಕೊಳಗ– ಇಕ್ಕೊಳಗ > ಇಕ್ಕಳ
ಐದೊಳಗ–ಐದು + ಕೊಳಗ > ಐಗಳ
ಹಣ್ಣು–(ಪಣ್ > ಹಣ್ಣು) ಮಾಡು
ಪಾವುಡು–ಪೇಟೆ
ಪಲ್ಲೇವು–ಹೊದ್ದ ಶಾಲ, ಹಾಕಿದ ಬಟ್ಟೆಗಳೆಲ್ಲ ಪಲ್ಲಟವಾದವು
ಹಾಲಾಗರ–ಹಾಲುಕುಡಿಯುವ ಮರಿ
ಕಪ್ಪಿನರಿವೆ–ಕಚ್ಚೆ
ಕಕ್ಕೊಸ್ತ–ಜಿಂಕೆ ಚರ್ಮದಲ್ಲಿ ಮಾಡಿದ ಜೋಳಿಗೆ
ಬರತಾಪು–ತೀರಿತು
ಗಂಜಿಕೂಳು } ನೆಲ್ಲಕ್ಕಿ ಅನ್ನ
ಬಿಳಿಯ ಕೂಳು }
ಗಯ–ಗಾಯ
ಕಾಂಡೇವ–ಕತ್ತಿ
ತಪ್ಪಾನೆ–ಬೇಗ
ವಾಗುರಿ–ಉಪ್ಪರಿಗೆ
ಪುನಗಿನಬೆಕ್ಕು–ಸುವಾರದಗಿಣಿ, ಗಿಣಿಯ ರೂಪದ ಒಂದು ಕಲ್ಪನೆ
ವಾಲೆ–ಕಿವಿಗೆ ಹಾಕುವ ಆಭರಣ
ಬಂದಿ–ರಟ್ಟೆಗೆ ಹಾಕಿಕೊಳ್ಳುವ ಆಭರಣ
ಪುಟ್ಟಣಿಕಣ–ರವಿಕೆಕಣ
ಗಜಮಲಕು–ಚೆಂಡೋಲೆ ಕೆಳಗೆ ಇರುವ ಕುಚ್ಚು
ನೆಲ್ಲು–ಅಕ್ಕಿ
ದುಡಮೀರೆ–ಮಾಡಿರಿ
ಹಚ್ಚಡ–ಮೈಮೇಲೆ ಹೊದಿಯೊ ಬಟ್ಟೆ
ಸಾಲಿ–ಶಾಲು
ಕಾವೇರಿಪಟ್ಟಣ–ಬಿರುಸಿನ ಪಟ್ಟಣ (ಕಾವು + ಪಿರಿದ + ಪಟ್ಟಣ)
ಗಾರೆಮೊಳ್ಳು–ಕಾರೆಮುಳ್ಳು
ಮಕರಂಭ–ಮುಖಕ್ಕೆ ಹಾಕುವ ಬಂಗಾರದ ಮುಚ್ಚಳಿಕೆ (ಮುಖವಾಡ)
ಜತ್ತೀಲಿ–ಜೊತೆಯಲ್ಲಿ, ಜೋಡಿ, ಎರಡು
ಸುಂಗ–ಪೇಟ

ನವುಲಂಗ_ಪೇಟದಿಂದ ತಲೆಹಿಂದಕ್ಕೆ ಬಿಟ್ಟ ಕುಚ್ಚು

ತಪ್ಪ_ತೆಪ್ಪ

ಲಾವಳ_ಸಾಲುಗಟ್ಟಿದ ಹಾಗೆ (ಗೆಜ್ಜೆ ಕಟ್ಟಿದಂತೆ)

ಕಲ್ಡೇವು_ಕತ್ತಿ

ಅನಕಂದೆ_ಅನುಕಂಪ

ಸ್ವಾತಿಕಲ್ಲು_ಒಂದು ರೀತಿ ಕಲ್ಲು

ನೆತ್ತೀಯ ಜುಂಜೊ_ತಲೆಯ ಜುಟ್ಟು

ಹಿರುಬೂಲಿ_ಹಿರಿಯ ಹುಲಿ

ಕಿರುಬೂಲಿ_ಕಿರಿಯ ಹುಲಿ

ಹಾಲಾರದ ಬುತ್ತಿ_ಹಾಲು ಆರದಂತದ್ದು

ಗುಡಿಗೂಡೆ_ಬಂಗಿ

ಅರಗಡುದು_ಒಂದು ಕಡೆಯಿಂದ

ಥಣ್ಯಾರೆ_ಹೂಡಿದ್ದಾರೆ

ದವುನಾವೊ_ಕತ್ತಿ, ಕಠಾರಿ ಮುಂತಾದ ಸಾಮಗ್ರಿ

ಕಟ್ಟೆಲಗು_ಕತ್ತಿ, ಗುರಾಣಿ

ದಾರುಂದಾವ_ಮನೆಯ ಮುಂದಿನ ಭಾಗ

ಗಾಡಾನ_ಬೇಗ

ಅವತೋಳ_ಔತಣ

ಎಳಗ_ಕುದುರೆ

ಒಕ್ಕಳಕ್ಕಿ_ಐವತ್ತು ಸೇರು

ಇಕ್ಕಾಳಾಲು_ನೂರು ಸೇರು ಹಾಲು

ಪಣೆಗಂಧ_ಹಣೆಗಿಡುವ ಗಂಧ

ಅಕ್ಕುಸ್ತ_ಅಕ್ಷತೆ ಕಾಳು

ವಲುವೂತ_ವನದಾಡುತ್ತಾ

ಸಾವುಂದ_ಸಂಬಂಧ

ಅಯುಬೋಗಿ_ಐಬೋಗಿ

ರವುದೀಲಿ_ರೋವುದಲಿ

ಕಗ್ಗಾಕೆ_ಜಗಳಕ್ಕೆ

ಸುರತಾಳ_ಸುರು ಸುರು ಮುಂದೆ ಹೋಗುವವನು

ಅಂಬು_ಕತ್ತಿ, ಕಠಾರಿ

ಸಾಣಿಕಲ_ಇಸ್ತ್ರಿ

ದಸುರಿ_ಬಟ್ಟೆ

ಹಸೆಕಲ್ಲು_ಕಾರ ಅರೆಯುವ ಕಲ್ಲು

ವಡ್ಡಿ_ನಾಲ್ಕು

ಪುಲ್ಲಗೋರಿ_ಹೋರಿಕರು (ಹುಲ್ಲು ತಿನ್ನುವ ಹೋರಿ)

ಪೀಚಂಡಿ_ಮೈತುಂಬಾ ಬಿಗಿಯುವುದು

ಸಿರಿನ್ಯಾರೆ_ಸಿರಿ ನರೆ (ಹುಡುಗರೂ ಅಲ್ಲ ಮುದುಕರೂ ಅಲ್ಲ)

ಈಲತ್ತಿ_ಆಗ ತಾನೆ ಬರುವಂತಿದ್ದ ಮೀಸೆ

ದುಂದಿನೋನು_ಅವಾಂತರದವನು

ಶಪ್ಪೆ_ಜೋಳದ ದಂಟುಗಳು

ಕೊಪ್ಪು_ಕಿವಿ ಮೇಲಿನ ತುದಿಯಲ್ಲಿ ಇಡುವ ಆಭರಣ (ಕಣಸ ಇದ್ದಹಾಗೆ ಇದೂ ಭಾಗ್ಯದ ಸಂಕೇತ)

ಸಭೆ_ಸಭೆ

ಕ್ವಾಲ್ಡು_ <ಕೊರಡು

ಆಪಿನುಲ್ಲು_ಹಳ್ಳದಲ್ಲಿ ಬೆಳೆಯುವ ಒಂದು ಬಗೆಯ ಹುಲ್ಲು. ಮನೆಗಳ ಚಾವಣಿಗಾಗಿ ಬಳಸುತ್ತಾರೆ (ಇಂದಿಗೂ)

ಬಾಬಾಲಿ-ಬಾವಲಿ (ಕಿವಿಯ ಆಭರಣ)

ವ್ವಾದ_ಹೋದ

ಕೊಲ_ <ಕುಲ

ಸಕ್ಕೂರ_ <ಶುಕ್ರ (ಬೆಳ್ಳಿಚುಕ್ಕಿ)

ಪಡಿಯ_ಧಾನ್ಯ (ಅಳತೆ)

ರೈತ_ <ರಕ್ತ

ಸಿಂಗಾರಿ_ಸಿಂಗಾಡಿ

ಮೆಲ_ಮೇಲೆ

ಕಾಳುಕ್ಕೆ_ಕಾಳಗಕ್ಕೆ

## ವಕ್ತೃ ವಿವರ

### ೧. ತಾಳೀಕಟ್ಟೆ ಕುಲ್ಡವ್ವ

ನಿಜನಾಮ ಗಂಗವ್ವ. ಊರು ತಾಳೀಕಟ್ಟೆ. ವಯಸ್ಸು ೭೫ ವರ್ಷಗಳು. ಜಾತಿ ಕುರುಬರು. ಗಂಡನ ಹೆಸರು ಗಂಗೂರು ಕೆಂಚಪ್ಪ. ಮಕ್ಕಳು—ಎರಡು ಗಂಡು. ಕಸುಬು ಕೂಲಿ. ಹುಟ್ಟುಕುರುಡಿಯಾದರೂ ಅಡಿಗೆಯಿಂದ ಕೃಷಿ ಸಂಬಂಧಿ ಕೆಲಸಗಳನ್ನೆಲ್ಲಾ ಮಾಡುತ್ತಾಳೆ. ಈಕೆ ತನ್ನ ಎಂಟು ವರ್ಷಕ್ಕಿಂತ ಮೊದಲೆ ಈ ಕಾಳಗದ ಪದವನ್ನು ಕಲಿತಿದ್ದಳಂತೆ. ಇದನ್ನು ಬ್ಯಾಲನೂರ ಕುರುಬರ ಜಿಜ್ಜಿ ಕೋಲಕಾರ ನಿಂಗಣ್ಣ ಎಂಬುವನಿಂದ ಕಲಿತಿದ್ದಳಂತೆ. ಆತ ಅವನ ತಾಯಿಯಿಂದ ಈ ಪದವನ್ನು ಕಲಿತಿದ್ದನಂತೆ.

ಇದರ ಜೊತೆಗೆ ಈಕೆ ಹಾಡುವ ಜನಪದ ಗೀತೆ, ಕಾವ್ಯಗಳೆಂದರೆ :

೧. ಸೋಬಾನೆ ಪದಗಳು (೧೮ ಶಾಸ್ತ್ರಕ್ಕೆ ಸಂಬಂಧಪಟ್ಟ ೧೮ ಪದಗಳು.)
೨. ಗುಣಸಾಗರಿ
೩. ಗುಳ್ಳವ್ವ
೪. ನೀರಳವ್ವ
೫. ತಾಳಕಟ್ಟದಮ್ಮ
೬. ಸತ್ತ ಕಾಳಿಂಗರಾಯನ ಕತೆ
೭. ಮದಗದ ಕೆಂಚಮ್ಮ
೮. ಅಂತರಗಟ್ಟೆಯಮ್ಮನ ಕತೆ
೯. ಕರಿಯಮ್ಮನ ಕತೆ
೧೦. ತಾಳೀಕಟ್ಟೆ ಹಿರಿಯಯ್ಯನ ಹೊಗಳುವ ಹಾಡುಗಳು ಮುಂತಾದ ಜನಪದ ಕಾವ್ಯಗಳನ್ನು ಹಾಡುತ್ತಾಳೆ.

### ೨ ರಾಮಕ್ಕ

ಊರು ತಾಳೀಕಟ್ಟೆ, ವಯಸ್ಸು ೫೦ ವರ್ಷಗಳು. ಜಾತಿ ಕುರುಬರು. ಗಂಡನ ಹೆಸರು ಮೂಡುಬಾಗಲ ಮರಿಗೆಂಚಪ್ಪ. ಮಕ್ಕಳು ೫ ಹೆಣ್ಣು ೧ ಗಂಡು. ಕಸುಬು ರೈತಾಪಿಯ ಎಲ್ಲಾ ಕೆಲಸಗಳು. ಈಕೆ ತಾಳೀಕಟ್ಟೆ ಕುಲ್ಡವ್ವನ ಜೊತೆಗೆ ಮುಮ್ಮೇಳವಾಗಿ ಹಾಡುತ್ತಾಳೆ.

### ೩. ಸತ್ಯವ್ವ

ಊರು ತಾಳೀಕಟ್ಟೆ. ವಯಸ್ಸು ೪೫. ಜಾತಿ ಕುರುಬರು. ಕಸುಬು ರೈತಾಪಿ ಕೆಲಸ. ಅವಿವಾಹಿತೆ.

೪. ಸಿದ್ದವ್ವ

ಊರು ತಾಳೀಕಟ್ಟೆ. ವಯಸ್ಸು ೫೫ ವರ್ಷಗಳು. ಜಾತಿ ಕುರುಬರು. ಗಂಡನ ಹೆಸರು ಛೇರ್ಮನ್ ಬಸಪ್ಪ. ಮಕ್ಕಳು ೨ ಹೆಣ್ಣು ೨ ಗಂಡು. ಕಸುಬು ರೈತಾಪಿ ಕೆಲಸ.

ಸಾಮಾನ್ಯವಾಗಿ ಈ ಇಬ್ಬರೂ ಹಿಮ್ಮೇಳದಲ್ಲಿ ಹಾಡುತ್ತಾರೆ. ಕೆಲವೊಮ್ಮೆ ತಾಳೀಕಟ್ಟೆ ಕುಲ್ಡವ್ವನ ಜೊತೆ ಈ ಮೂರು ಜನರಲ್ಲಿ ಯಾರು ಬೇಕಾದರೂ ಹಾಡುತ್ತಾರೆ. ಉಳಿದಿಬ್ಬರು ಹಿಮ್ಮೇಳವಾಗಿರುತ್ತಾರೆ.

ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತಂತೆ ಹೇರಳವಾದ ಕಾವ್ಯಗಳು ಕಂಡುಬರುತ್ತವೆ. ಜನಾಂಗದ ವೀರಪುರುಷರಿಗೆ ಸಂಬಂಧಪಟ್ಟ ವೀರಕಾವ್ಯಗಳು ಇವೆ. ಅನೇಕ ಬಗೆಯ ತ್ಯಾಗ ಬಲಿದಾನದ ಕಥೆಗಳು ಇವೆ. ಧಾರ್ಮಿಕ ಸಂಪ್ರದಾಯಗಳಲ್ಲಿ ಆಚರಣೆ ವಿಧಿಗಳಲ್ಲಿ ಈ ಕಾವ್ಯಗಳನ್ನು ಪವಿತ್ರ ಕಾವ್ಯಗಳೆಂದು ಪರಿಗಣಿಸಿ, ಉಳಿಸಿ ಕೊಂಡು ಬಂದ ಪರಂಪರೆ ಇದೆ. ಈ ಕಾವ್ಯಗಳಲ್ಲಿ ಧಾರ್ಮಿಕ ಅಂಶಗಳ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಅಂಶಗಳು ಸೇರಿರುತ್ತವೆ. ಇಂತಹ ಒಂದು ಶ್ರೇಷ್ಠ ಕಾವ್ಯಗಳ ಸಾಲಿಗೆ "ಏಳೂರು ದೇವರ ಕಾಳಗ" ಕೂಡ ಸೇರಿರುತ್ತದೆ. ತರುಣ ವಿದ್ವಾಂಸ ರಾದ ಶ್ರೀ ರಾಜಪ್ಪ ದಳವಾಯಿಯವರು ಕೆಲವು ವರ್ಷಗಳ ಹಿಂದೆ ಈ ಕಾವ್ಯದ ಬಗ್ಗೆ ನನ್ನೊಡನೆ ಪ್ರಸ್ತಾಪಿಸಿದ್ದರು. ಸಾಂಸ್ಕೃತಿಕ ಮಹತ್ವದ ಈ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿ, ಅದರ ಸಂಪ್ರದಾಯವನ್ನು ಗುರುತಿಸಬೇಕೆಂದು ಅವರೊಡನೆ ನಾನು ಮಾತನಾಡಿದ್ದೆ. ಶ್ರೀಯುತರು ಈ ಕಾವ್ಯದ ಮೂಲ ಚೂಲಗಳನ್ನೆಲ್ಲ ಹುಡುಕಿ ಸಾಧ್ಯ ವಾದ ಮಟ್ಟಿಗೂ ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಸಂಗ್ರಹಕಾರ್ಯವನ್ನು ನಡೆಸಿದ್ದಾರೆ. ಈ ಕಾರ್ಯಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.